2. ನಿಲುವಳಿ ಸೂಚನೆಗೆ ಅನುಮತಿ ಕೋರಿಕೆ

ವಿಷಯ :- ರೈತರ ಸಾಲ ಮರುಪಾವತಿ ಅವಧಿಯನ್ನು ಮಾರ್ಚ್ 2006ರ ವರೆಗೆ ವಿಸ್ತರಿಸುವ ಬಗ್ಗೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ, ರೈತರ ಬಡ್ಡಿ ಮನ್ನಾದ ಕಾಲಾವಧಿಯನ್ನು ವಿಸ್ತರಣೆ ಮಾಡಬೇಕೆಂದು ನಾನು ಒಂದು ನಿಲುವಳಿ ಸೂಚನೆ ಕೊಟ್ಟಿದ್ದೆ.

ಅಧ್ಯಕ್ಷರು :- ಒಂದು ನಿಮಿಷ. ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು. ಮಾನ್ಯ ಹೆಚ್.ಕೆ. ಪಾಟೀಲ್‌ರವರೇ, ಕಾಗದ ಪತ್ರಗಳನ್ನು ಮಂಡಿಸಿ.

ಶ್ರೀ ಹೆಚ್.ಕೆ. ಪಾಟೀಲ್ :- ಸನ್ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆ ಪಡೆದು

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಅಧ್ಯಕ್ಷರೇ, ಈಗ ಕಾಗದ ಪತ್ರಗಳನ್ನು ಮಂಡಿಸುವ ಹಾಗಿಲ್ಲ. ದಯಮಾಡಿ ನಿಲುವಳಿ ಸೂಚನೆಗೆ ಮೊದಲು ಆದ್ಯತೆ ಕೊಡಬೇಕು. ರೈತರ ಬಡ್ಡಿ ಮನ್ನಾದ ಅವಧಿಯ ಬಗ್ಗೆ ನಾವೆಲ್ಲ ಸೇರಿ ನಿಲುವಳಿ ಸೂಚನೆ ಕೊಟ್ಟಿದ್ದೇವೆ ನಾವು. ತಮಗೆ ಅತ್ಯಂತ ಗೌರವದಿಂದ ಹೇಳುತ್ತಿದ್ದೇವೆ. ನಿಲುವಳಿ ಸೂಚನೆ ಎಂದ ಮೇಲೆ ಬೇರೆ ಯಾವುದೇ ವಿಷಯಗಳನ್ನು ತೆಗೆದುಕೊಳ್ಳಕೂಡದು. ನಿಲುವಳಿ ಸೂಚನೆ ಇತ್ಯರ್ಥವಾಗುವವರೆಗೂ ಬೇರೆ ಯಾವುದೇ ಪ್ರಶ್ನೆ ಬರಕೂಡದು. ಆದ್ದರಿಂದ, ದಯಮಾಡಿ ತಾವು ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ಎಮರ್ಜೆನ್ಸಿ ಇದ್ದರೆ ಅಥವಾ ಪ್ರಾಣ ಹೋಗುವಂಥಾದ್ದೇನಾದರೂ ಇದ್ದರೆ ನಾವು ತಕ್ಷಣ ಮಾಡೋಣ, ನಾವು ಸುದೀರ್ಘಕಾಲ ಅಧಿವೇಶನ ಸೇರುತ್ತಿರುವುದರಿಂದ ಎಲ್ಲವನ್ನೂ ಮಾಡೋಣ, ಆದರೆ ಬಹಳ ಪ್ರಮುಖವಾಗಿರುವಂಥಾದ್ದು ಎಂದರೆ, ಈ ಮನೆಯ ವಿರೋಧಕಪಕ್ಷದಲ್ಲಿರುವಂಥ ಎಲ್ಲರೂ ಸೇರಿ ಇಂದು ಬೆಳಿಗ್ಗೆ ಕಳಕಳಿಯಿಂದ ಮಾತನಾಡಿರುವಂಥ ಒಂದು ಸಂಗತಿ ಎಂದರೆ ತಮಗೆ ನಿಲುವಳಿ ಸೂಚನೆ ಕಳುಹಿಸಿರುವಂಥಾದ್ದು. ಸನ್ಮಾನ್ಯ ಮಾಧುಸ್ವಾಮಿಯವರು, ವಾಟಾಳ್ ನಾಗರಾಜ್‌ರವರು, ರಾಜೇಂದ್ರನ್‌ರವರು, ಜಗದೀಶ್‌ಶೆಟ್ಟರ್‌ರವರು, ಶ್ರೀರಾಮರೆಡ್ಡಿಯವರು ಮತ್ತು ನಾವೆಲ್ಲರೂ ಸೇರಿ ಇಂದು ಬೆಳಿಗ್ಗೆ ಚರ್ಚೆ ಮಾಡಿ, ನಿಲುವಳಿ ಸೂಚನೆ ಮೂಲಕ ಒಂದು ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡಬೇಕೆಂದು ನಾವು ಸೂಚನೆ ಕಳುಹಿಸಿಕೊಟ್ಟಿದ್ದೇವೆ. ಆ ನಿಲುವಳಿ ಸೂಚನೆ ಹೀಗಿದೆ "ರಾಜ್ಯದ ಸಹಕಾರಿ ಬ್ಯಾಂಕ್ ಮತ್ತು ಸಹಕಾರಿ ಸಂಘಗಳಿಂದ ಪಡೆದ ಸಾಲದ ಅಸಲನ್ನು ಪೂರ್ತಿ ತೀರುವಳಿ ಮಾಡುವವರಿಗೆ ಬಡ್ಡಿ ಹಾಗೂ ಸುಸ್ತಿ ಬಡ್ಡಿ

ಮನ್ನಾ ಮಾಡುವ ಯೋಜನೆ ಇವತ್ತಿಗೆ ಮುಗಿಯುತ್ತಿದೆ. ಸತತ ಬರಗಾಲದಿಂದ ತೊಳಲುತ್ತಿದ್ದ ರೈತರಿಗೆ ಈ ಅವಧಿಯಲ್ಲಿ ಹಣ ಕೊಡಿಸಲಾಗದೇ ಇರುವ ಪರಿಸ್ಥಿತಿಯಿದ್ದು ಹಾಗೂ ಈ ಯೋಜನೆಯ ಅನುಷ್ಠಾನದ ಸುತ್ತೋಲೆ ತಡವಾಗಿ ಬ್ಯಾಂಕುಗಳಿಗೆ ತಲುಪಿದ್ದು ಹಾಗೂ ಕೃಷಿ ಸಾಲದಲ್ಲಿ ತೋಟದ ಮನೆ, ಪೌಲ್ಟ್ರಿ ಫಾರಂ, ತೆಂಗು ಅಭಿವೃದ್ಧಿ, ಕೋಳಿ ಸಾಗಣೆ ಮುಂತಾದ ಯೋಜನೆಗಳು ಸೇರಿಲ್ಲದ ಬಗ್ಗೆ ಹಾಗೂ ಈ ತಿದ್ದುಪಡಿಯೊಂದಿಗೆ ಸಾಲ ಮರುಪಾವತಿ ಅವಧಿಯನ್ನು ಮಾರ್ಚ್ 2006ರವರೆಗೆ ವಿಸ್ತರಿಸುವಂತೆ ಒತ್ತಾಯ ಮಾಡುವುದು". ಈ ಬಗ್ಗೆ ನಿಲುವಳಿ ಸೂಚನೆ ಇದ್ದು, ಅದನ್ನು ನಾನು ಪ್ರಸ್ತಾಪ ಮಾಡುತ್ತಿದ್ದೇನೆ. ನಾನು ಬಹಳ ನೊಂದು ಒಂದು ಮಾತನ್ನು ಹೇಳಲು ಇಷ್ಟಪಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು) :– ಸನ್ಮಾನ್ಯ ಅಧ್ಯಕ್ಷರೆ, ಪಾಯಿಂಟ್ ಆಫ್ ಆರ್ಡರ್ ಇದೆ. ಮಹತ್ವವಾದಂತ ವಿಚಾರದ ಬಗ್ಗೆ ನಿಲುವಳಿ ಸೂಚನೆಯನ್ನು ಮಾನ್ಯ ವಿರೋಧಪಕ್ಷದ ನಾಯಕರು ತಂದಿದ್ದಾರೆ. ಬಡ್ಡಿ ಮನ್ನಾ ಮಾಡತಕ್ಕಂಥ ವಿಚಾರದಲ್ಲಿ ಕೆಲವು ವಿಷಯಗಳನ್ನು ಸೇರಿಸಬೇಕು ಎಂದು ಹೇಳಿದ್ದಾರೆ. ಇದನ್ನು ತಾವು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದು. 'ಏಕೆಂದರೆ ಇದು ನಿರ್ದಿಷ್ಟವಾಗಿ ಆಗಿರತಕ್ಕಂಥಾದ್ದು ಅಲ್ಲ. ಇದರ ಜೊತೆಗೆ, ಮಾನ್ಯ ಶ್ರೀ ರಾಮರೆಡ್ಡಿಯವರೂ ಕೂಡ ಒಂದು ನಿಲುವಳಿ ಸೂಚನೆಯನ್ನು ಇದೇ ವಿಚಾರವಾಗಿ ಕಳುಹಿಸಿ ಕೊಟ್ಟಿದ್ದು. ಅದರಲ್ಲಿ ಅನೇಕ ವಿಚಾರಗಳನ್ನು ಸೇರಿಸಿದ್ದಾರೆ. ರಾಜ್ಯದಲ್ಲಿ ಬರಗಾಲದ ಪರಿಸ್ಥಿತಿ, ಕುಡಿಯುವ ನೀರಿನ ಗಂಭೀರ ಪರಿಸ್ಥಿತಿ, ರೈತರ ಸಾಲದ ಮೇಲಿನ ಬಡ್ಡಿ ಮನ್ನಾದ ಅವಧಿ ವಿಸ್ತರಣೆ, ಮಹಿಳೆಯರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ, ಅತ್ಯಾಚಾರ, ಕಾರ್ಮಿಕರ ಹೋರಾಟಗಳಲ್ಲಿ ಪೋಲಿಸರ ಮಧ್ಯಪ್ರವೇಶ ಮತ್ತು ಮಾಲೀಕರ ಗೂಂಡಾಗಿರಿ, ಸಿ.ಇ.ಟಿ ಸಮಸ್ಯೆ, ಇನ್ನು ಮುಂತಾದ ಜ್ವಲಂತ ಸಮಸ್ಯೆಗಳನ್ನು ಚರ್ಚಿಸಲು ನಿಲುವಳಿ ಸೂಚನೆ ಮಂಡಿಸಲು ಅವಕಾಶ ನೀಡಬೇಕು" ಎಂದು ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದಾರೆ. ಒಂದು ದಿನದಲ್ಲಿ ಎರಡು ನಿಲುವಳಿ ಸೂಚನೆಗಳನ್ನು ಕೈಗೆತ್ತಿಕೊಳ್ಳಲು ಬರುವುದಿಲ್ಲ. I am on point of order. That is why I am telling. ಮಾನ್ಯ ಶ್ರೀರಾಮರೆಡ್ಡಿಯವರು ನಿಲುವಳಿ ಸೂಚನೆಯಲ್ಲಿ ಬಹಳ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಆದರೆ ಒಂದು ನಿಲುವಳಿ ಸೂಚನೆಯಲ್ಲಿ ಒಂದಕ್ಕಿಂತ ಹೆಚ್ಚು ವಿಷಯ ಚರ್ಚಿಸಕೂಡದೆಂದು ಇದೆ. ಒಂದು ವಿಷಯವನ್ನು ಸನ್ಮಾನ್ಯ ವಿರೋಧಪಕ್ಷದ ನಾಯಕರು ಕೊಟ್ಟಿದ್ದಾರೆ. ಅದು ಚರ್ಚೆಗೆ ಆಹ್ವಾನವಾಗಿರತಕ್ಕಂಥ ವಿಷಯ. ಆದರೆ, ಶ್ರೀರಾಮರೆಡ್ಡಿಯವರು ಐದಾರು ವಿಷಯಗಳನ್ನು ಸೇರಿಸಿ ನಿಲುವಳಿ ಸೂಚನೆ ಕೊಟ್ಟಿರುವುದರಿಂದ ಅದನ್ನು ನಾವು ನಿಲುವಳಿ ಸೂಚನೆಗಾಗಿ ತೆಗೆದುಕೊಳ್ಳಲು ಬರುವುದಿಲ್ಲ. ನಿಯಮ 60 ರಲ್ಲಿ ಈ ರೀತಿ ಇದೆ. "ಈ ನಿಯಮಗಳ ಉಪಬಂಧಗಳಿಗೊಳಪಟ್ಟು ಸಾರ್ವಜನಿಕವಾಗಿ ಅತ್ಯಂತ

ಮಹತ್ವವುಳ್ಳ ಒಂದು ನಿರ್ದಿಷ್ಟ ವಿಷಯದ ಮೇಲೆ ಚರ್ಚೆ ನಡೆಸುವ ಉದ್ದೇಶಕ್ಕಾಗಿ ಸದನದ ಕಾರ್ಯಕಲಾಪ ನಿಲುವಳಿ ಬಗ್ಗೆ ಸೂಚನೆಯನ್ನು ತರಬಹುದು". ಆದರೆ ಇದರಲ್ಲಿ ಒಂದು ನಿರ್ದಿಷ್ಟ ವಿಷಯ ಇಲ್ಲದೇ ಇರುವುದಿರಂದ, ಮೊದಲು ನೋಟದಲ್ಲೇ ಇದನ್ನು ತಾವು ತಿರಸ್ಕರಿಸಬೇಕಾಗುತ್ತದೆ. ಎರಡನೇಯದಾಗಿ, ತಾವು ಒಪ್ಪುವುದಾದರೆ, ಮಾನ್ಯ ವಿರೋಧಪಕ್ಷದ ನಾಯಕರು ತಂದಿರುವ ನಿಲುವಳಿ ಸೂಚನೆಯಲ್ಲಿಯೇ ತಾವೂ ಮಾತನಾಡಬಹುದು. ಇದು ಮಹತ್ವವಾದಂಥ ವಿಷಯವಾಗಿದ್ದು, ಬಡ್ಡಿ ಮನ್ನಾಕ್ಕೆ ಇವತ್ತೇ ಕೊನೆಯ ದಿವಸವಾಗಿರತಕ್ಕಂಥ ಕಾರಣದಿಂದ ತಾವು ಅದನ್ನು ಇವತ್ತು ಎತ್ತಿದ್ದೀರಿ. ಆದರೆ ಇದನ್ನು ತಾವು ಬೇರೆ ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬಹುದೆಂದು ನಾನು ಮಾನ್ಯ ವಿರೋಧಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಏಕೆಂದರೆ, ನಿಲುವಳಿ ಸೂಚನೆಗೆ ಬೇಕಾಗಿರತಕ್ಕಂಥ ಗಂಭೀರತೆ ಇದಕ್ಕೆ ಇದ್ದರೂ ಕೂಡ ಇದು ಇತ್ತೀಚಿನ ದಿನಮಾನಗಳಲ್ಲಿ ಆಗಿರತಕ್ಕಂಥಾದ್ದು ಅಲ್ಲ. ಇದು ಹಿಂದೆ ಕಳುಹಿಸಿರತಕ್ಕಂಥ ಸರ್ಕಾರಿ ಆದೇಶ. ಇದನ್ನು ಪ್ರಸ್ತಾಪ ಮಾಡಲು ನಮಗೆ ಬೇರೆ ವೇದಿಕೆಗಳು ಇರಲಿಲ್ಲವಾದ ಕಾರಣ ಹಾಗೂ ಸದನ ಈ ದಿವಸ ಕಲೆತಿರುವ ಕಾರಣಕ್ಕಾಗಿ ಇದನ್ನು ಈ ದಿವಸ ತಂದಿದ್ದೇವೆ ಎಂದು ವಿರೋಧ ಪಕ್ಷದ ನಾಯಕರುಗಳು ಪ್ರಸ್ತಾಪ ಮಾಡಬಹುದು. ಆದರೆ ಇಲ್ಲಿ ಅವರಿಗೆ ಮುಖ್ಯವಾಗಿ ಬೇಕಾಗಿರತಕ್ಕಂಥಾದ್ದು ಏನೆಂದರೆ ಹಾಗೂ ಈ ನಿಲುವಳಿ ಸೂಚನೆಯ ಉದ್ದೇಶ ಮತ್ತು ಅವರ ಆಶಯ ಏನೆಂದರೆ, ಸರ್ಕಾರ ಇದಕ್ಕೆ ಸ್ಪಂದಿಸಬೇಕು ಮತ್ತು ಅದಕ್ಕೆ ಹೆಚ್ಚಿನ ಅವಧಿಯನ್ನು ಕೊಡಬೇಕು ಎನ್ನತಕ್ಕಂಥಾದ್ದು ಆಗಿರುವುದರಿಂದ, ತಾವು ಇದನ್ನು ಮತ್ತೊಂದು ರೂಪದಲ್ಲಿ ಚರ್ಚೆ ಮಾಡಿದರೆ ಒಳ್ಳೆಯದು, ಸನ್ಯಾನ್ಯ ಮುಖ್ಯಮಂತ್ರಿಗಳೂ ಸದನದಲ್ಲಿದ್ದಾರೆ. ಇದರ ಬಗ್ಗೆ ಒಂದು ನಿರ್ಣಯವನ್ನು ಮಾಡಿ ಅವರು ಸಕಾರಾತ್ಮಕವಾದ ಉತ್ತರವನ್ನು ಕೊಡುತ್ತಾರೆ. ಆದ್ದರಿಂದ ದಯವಿಟ್ಟು ತಾವು ಇದನ್ನು ಬೇರೆ ಒಂದು ರೂಪದಲ್ಲಿ ಚರ್ಚೆಗೆ ತೆಗೆದುಕೊಳ್ಳಬೇಕು. ಹಾಗೂ ಮಾನ್ಯ ಶ್ರೀರಾಮರೆಡ್ಡಿಯವರ ನಿಲುವಳಿ ಸೂಚನೆಯನ್ನು ತಾವು ತಿರಸ್ಕರಿಸಬೇಕೆಂದು ವಿನಂತಿ ಮಾಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ತಮ್ಮ ಪಾಯಿಂಟ್ ಆಫ್ ಆರ್ಡರ್, ನಾವು ಕೊಟ್ಟಿರುವಂಥ ನಿಲುವಳಿ ಸೂಚನೆಗೆ ಸಂಬಂಧಪಟ್ಟಿದೆಯೇ?

ಶ್ರೀ ಎಂ.ಪಿ. ಪ್ರಕಾಶ್ :– ಮಾನ್ಯ ಅಧ್ಯಕ್ಷರೆ, My Point of order is with regard to sriramareddy. ಏಕೆಂದರೆ, ಎರಡು ನಿಲುವಳಿ ಸೂಚನೆಗಳು ಒಂದೇ ಕಾಲದಲ್ಲಿ ಇವೆ. ಎರಡು ನಿ4ಲುವಳಿ ಸೂಚನೆಗಳನ್ನು ಎತ್ತಿದ್ದಾರೆ ಎನ್ನುವ ಕಾರಣಕ್ಕಾಗಿ ನನ್ನ ಪಾಯಿಂಟ್ ಆಫ್ ಆರ್ಡರ್.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಯಡಿಯೂರಪ್ಪನವರು ಹಾಗೂ ನಾವು ಕೊಟ್ಟಿರುವಂಥಾದ್ದಕ್ಕೆ ಇಲ್ಲ ಅಲ್ಲವೇ?

ಶ್ರೀ ಎಂ.ಪಿ. ಪ್ರಕಾಶ್ :- ಅದರ ಬಗ್ಗೆ ಪಾಯಿಂಟ್ ಆಫ್ ಆರ್ಡರ್ ಇಲ್ಲ. I am requesting him to take it up in some other form.

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ) :- ಮಾನ್ಯ ಅಧ್ಯಕ್ಷರೆ, ಅದನ್ನು ನಾವು ಇವತ್ತೇ ತರಲು ಕಾರಣವಿದೆ. ಆ ಯೋಜನೆ ಇವತ್ತು ಮುಗಿದು ಹೋಗಿ ಬಿಡುತ್ತದೆ. ಈ ಬಗ್ಗೆ ಇವತ್ತು ಇಲ್ಲಿಂದ ಒಂದು ಸಿಗ್ನಲ್ ಹೋಗಲಿಲ್ಲವೆಂದರೆ, ಎಲ್ಲಾ ಕೋ-ಆಪರೇಟಿವ್ ಬ್ಯಾಂಕುಗಳಲ್ಲಿ, ಸೊಸೈಟಿಗಳಲ್ಲಿ ಇವತ್ತು ಅಕೌಂಟ್ ಕ್ಲೋಸ್ ಆಗುತ್ತದೆ. ಇವತ್ತು ಅಸೆಂಬ್ಲಿ ಪ್ರಾರಂಭವಾಗುತ್ತದೆ, ಅಲ್ಲಿ ಚರ್ಚೆ ಮಾಡಿದ ನಂತರ ಅದು ಎಕ್ಸ್‌ಟೆಂಡ್ ಆಗುತ್ತದೋ ಅಥವಾ ಇವತ್ತೇ ಮುಗಿಯುತ್ತದೆಯೋ ಎಂದು ಜನ ಭಾರೀ ಗೊಂದಲದಲ್ಲಿದ್ದಾರೆ. ಇಲ್ಲದಿದ್ದರೆ, ಇವತ್ತು ಇದನ್ನು ನಾವು ತರುವಂಥ ಅಗತ್ಯ ಇರಲಿಲ್ಲ. ಆದ್ದರಿಂದ ಇದು ಇವತ್ತೇ ಚರ್ಚೆಯಾಗಬೇಕಾಗಿರುವುದು ವಾಸ್ತವ. ಏಕೆಂದರೆ, ಇವತ್ತು ಈ ಬಗ್ಗೆ ಇಲ್ಲಿ ಏನಾದರೂ ಚರ್ಚೆಯಾಗದೇ ಹೋದರೆ, ನಂತರ ಸರ್ಕಾರದವರು ಏನು ಉತ್ತರ ಕೊಟ್ಟರೂ ಅದರ ಪ್ರಯೋಜನ ಜನರಿಗೆ ಸಿಕ್ಕುವುದಿಲ್ಲ. ಇವತ್ತು ಸಂಜೆ ಆರೇಳು ಗಂಟೆಗೆ ಅಕೌಂಟ್ ಕ್ಲೋಸ್ ಮಾಡಿದ ಮೇಲೆ ಮತ್ತೆ ಬ್ಯಾಂಕಿನವರಿಗೆ ಗೊಂದಲಗಳಾಗುತ್ತವೆ.

ಇದರ ಮಧ್ಯೆ ಇನ್ನೂ ಅಷ್ಟು ವಿಷಯಗಳನ್ನು ಸೇರಿಸಿದ್ದೇವೆ. ಅಲ್ಲಿ ಏನೇನು ತೊಡಕು ಆಗಿದೆ ಅದನ್ನೆಲ್ಲಾ ಇಲ್ಲಿ ಚರ್ಚೆ ಮಾಡಿದರೆ, ಇವತ್ತು ಒಂದು ಆದೇಶವನ್ನು ಕೊಡುವಾಗ ಅದನ್ನೆಲ್ಲಾ ಸ್ಪಷ್ಟವಾಗಿ ಸರ್ಕಾರ ಕೊಡಲಿಕ್ಕೆ ಆಗುತ್ತದೆ ಎನ್ನುವ ಉದ್ದೇಶದಿಂದ ಇವತ್ತು ನಾವು ನಿಲುವಳಿ ಸೂಚನೆಯನ್ನು ತಂದಿದ್ದೇವೆ. ದಯಮಾಡಿ ನಿಲುವಳಿ ಸೂಚನೆಗೆ ತಾವು ಅಲೋ ಮಾಡಬೇಕು. ಇದು ಬಹಳ ಪ್ರಾಮುಖ್ಯವಾದದ್ದು. ಅದು ಇವತ್ತಿನ ದಿವಸಕ್ಕೆ ಪ್ರಾಮುಖ್ಯವಾಗಿದೆ. ಅದಕ್ಕಾಗಿ ನಾವು ತಮ್ಮನ್ನು ಕನ್‌ವಿನ್ಸ್ ಮಾಡಿದ್ದೇವೆಂದು ತಿಳಿದುಕೊಳ್ಳುತ್ತೇವೆ. ಅದರಲ್ಲಿ ಇವತ್ತೇ ಆಗಬೇಕಾಗಿರುವ ಕೆಲಸವಾಗಿರುವುದರಿಂದ ದಯವಿಟ್ಟು ಅಲೊ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ :- ಮಾನ್ಯ ಅಧ್ಯಕ್ಷರೆ ನಾನು ಕೊಟ್ಟಿರತಕ್ಕಂಥ ನಿಲುವಳಿ ಸೂಚನೆ ಮೇಲ್ನೋಟಕ್ಕೆ ಸರಿಯಿಲ್ಲ. ತಿರಸ್ಕರಿಸಬಹುದೆಂದು ಮಾನ್ಯ ಪ್ರಕಾಶ್‌ರವರು ಹೇಳಿದ್ದಾರೆ. ನಿಯಮಾವಳಿ ಪ್ರಕಾರ ಅದು ಸರಿ ಇದೆಯೆಂದು ನಾನು ಕೂಡ ಒಪ್ಪುತ್ತೇನೆ. ಆದರೆ ನಾನು ಪ್ರಸ್ತಾಪಿಸಿರತಕ್ಕಂಥ ವಿಚಾರದಲ್ಲಿ ರೈತರ ಬಡ್ಡಿ ಮನ್ನಾ ಅವಧಿಯನ್ನು ವಿಸ್ತರಣೆ ಮಾಡಬೇಕೆನ್ನುವ ವಿಚಾರವನ್ನು ಸೇರಿಸಿದ್ದೇನೆ. ಅದನ್ನು ಯಾವ ರೀತಿಯಲ್ಲಿ

ಚರ್ಚೆ ಮಾಡಲಿಕ್ಕೆ ಕೊಡುತ್ತೀರಿ. ಯಾವ ರೀತಿಯಲ್ಲಿ ಕೊಡಲ್ಲವೆನ್ನುವ ತೀರ್ಮು ಕೊಡುವುದು ಅಂತಿಮವಾಗಿ ನಿಮಗೆ ಬಿಟ್ಟ ವಿಚಾರವಾಗಿದೆ. ಆದರೆ ಆ ವಿಚಾರ ಇಲ್ಲಿ ಚರ್ಚೆಯಾಗಬೇಕು. ಏಕೆಂದರೆ ಇವತ್ತು ಕಡೆಯ ದಿವಸ ಆಗಿದ್ದು, ಇವತ್ತು ಆ ತೀರ್ಮಾನ ಆಗದೆ ಇದ್ದರೆ ನಮ್ಮ ರೈತರಿಗೆ ಬಹಳ ಸಮಸ್ಯೆಯಾಗುತ್ತದೆ. ಏಕೆಂದರೆ ಮಳೆಗಾಲ ಈಗ ಪ್ರಾರಂಭವಾಗುತ್ತಿದೆ. ಕೆಲವು ಕಡೆ ಆಗಿಲ್ಲ. ಬಿತ್ತನೆ ಮಾಡಲಿಕ್ಕೆ ಅವರ ಹತ್ತಿರ ಹಣವಿಲ್ಲ. ಸಾಲ ತೀರಿಸುವುದಕ್ಕೆ ಸಾಧ್ಯವಿಲ್ಲ. ಈಗ ಇನ್ನೂ ಇನ್ವೆಸ್ಟಮೆಂಟ್ ಮಾಡಬೇಕು. ಆದರೆ ಅವರು ವಾಪಸ್ಸು ಕೊಡಲಿಕ್ಕೆ ಸಾಧ್ಯವಿಲ್ಲವೆಂದು ಹೇಳುವ ಕಾರಣಕ್ಕೋಸ್ಕರ ಈ ನಿಲುವಳಿ ಸೂಚನೆಯನ್ನು ತಂದಿದ್ದೇವೆ. ದಯವಿಟ್ಟು ಚರ್ಚೆ ಮಾಡಲಿಕ್ಕೆ ತಾವು ಅವಕಾಶ ಮಾಡಿಕೊಡಬೇಕೆಂದು ನಾನು ವಿನಂತಿಸುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ :– ಈ ವಿಚಾರಕ್ಕೆ ಸಂಬಂಧಿಸಿದಂತೆ ಮಾನ್ಯ ಯಡಿಯೂರಪ್ಪನವರು ತಂದಿರುವ ನಿಲುವಳಿ ಸೂಚನೆಯಲ್ಲಿ ಮಾನ್ಯ ಶ್ರೀರಾಮರೆಡ್ಡಿಯವರು ಕೂಡ ಭಾಗವಹಿಸಬಹುದು. ಆದರೆ ಅವರು ಕೊಟ್ಟಿರುವ ಪ್ರತ್ಯೇಕ ನಿಲುವಳಿ ಸೂಚನೆ ಅದು ನಿಯಮಾವಳಿ ಪ್ರಕಾರ ಚರ್ಚೆಗೆ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಅದನ್ನು ನಾನು ಒಪ್ಪಿಕೊಂಡಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :– ಅದನ್ನು ಮಾನ್ಯ ಶ್ರೀರಾಮರೆಡ್ಡಿಯವರು ಒಪ್ಪಿಕೊಂಡಿದ್ದಾರೆ. ಈಗ ಮಾನ್ಯ ಯಡಿಯೂರಪ್ಪನವರು ತಂದಿರುವ ನಿಲುವಳಿ ಸೂಚನೆ ಬಹಳ ಪ್ರಮುಖವಾದುದಾಗಿದೆ. ಅದನ್ನು ಇಲ್ಲಿ ಚರ್ಚೆಗೆ ಬೇರೆ ರೂಪದಲ್ಲಿ ತರುವ ಪ್ರಶ್ನೆ ಬಿಡಿ. ನಿಲುವಳಿ ಸೂಚನೆ ಎಂದರೆ ಅದರಲ್ಲಿ ಬರುವ ವಿಷಯಕ್ಕೆ ಗಾಂಭೀರ್ಯತೆ, ಗಾಢತೆ ಇರುತ್ತದಾದುದರಿಂದ ಈ ನಿಯಮದ ಕೆಳಗೆ ತರಲಾಗುತ್ತದೆ. ಆದ್ದರಿಂದ ನಿಲುವಳಿ ಸೂಚನೆಯನ್ನು ಬದಲಾವಣೆ ಮಾಡಿ ಬೇರೆ ವಿಚಾರದಲ್ಲಿ ಚರ್ಚೆ ಆಗಬಾರದು ನಿಲುವಳಿ ಸೂಚನೆಯೇ ಈಗ ಚರ್ಚೆಯಾಗಬೇಕು.

ಅಧ್ಯಕ್ಷರು :– ನಾನು ಹೇಳುವುದೇನೆಂದರೆ, ಮಾನ್ಯ ಪ್ರಕಾಶ್‌ರವರು ಏನು Point of order ಎತ್ತಿದ್ದಾರೆ ಅದರಂತೆ ಮಾನ್ಯ ಶ್ರೀ ರಾಮರೆಡ್ಡಿಯವರು ಕೊಟ್ಟಿರುವ ನಿಲುವಳಿ ಸೂಚನೆಯಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿರುವುದರಿಂದ ಅದನ್ನು ತಿರಸ್ಕರಿಸಲಾಗಿದೆ. ಆದರೆ ಮಾನ್ಯ ವಿರೋಧ ಪಕ್ಷದ ನಾಯಕರು ಏನು ನಿಲುವಳಿ ಸೂಚನೆಯನ್ನು ಕಳುಹಿಸಿದ್ದಾರೆ ಅದರಲ್ಲಿ ಅವರು ಕೂಡ ಭಾಗವಹಿಸಬಹುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ಆಯಿತು. ಅದರಲ್ಲಿ ನಮ್ಮದೇನೂ ತಕರಾರು ಇಲ್ಲ.

(ಮುಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್ (ಶ್ರೀನಿವಾಸಪುರ) :– ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಈ ವಿಷಯ ಬಹಳ ಗಂಭೀರವಾದುದು ಮತ್ತು ಬಹಳ ಪ್ರಾಮುಖ್ಯವಾದುದಾಗಿರುವುದರಿಂದ ಚರ್ಚೆ ಬೇಡ ಎಂದು ಹೇಳುವುದಿಲ್ಲ. ಇದರಲ್ಲಿ ನಾವು ಕೂಡ ಪಾಲ್ಗೊಳ್ಳಬೇಕೆಂದಿದ್ದೇವೆ. ಆದ್ದರಿಂದ ನಿಲುವಳಿ ಸೂಚನೆಯಲ್ಲಿ ಚರ್ಚೆ ಎಂದರೆ ಇದರಿಂದ ನಮಗೆ restriction ಆಗುತ್ತದೆ. Please take it up under some other rule. ನಾವು ಕೂಡ ಈ ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಅವಕಾಶವಾಗುತ್ತದೆಂದು appeal ಮಾಡಿಕೊಳ್ಳುತ್ತಿದ್ದೇವೆ. Sir, I am appealing. ದಯವಿಟ್ಟು ಅದನ್ನು convert ಮಾಡಬೇಕೆಂದು ತಮ್ಮಲ್ಲಿ ನಾವು appeal ಮಾಡಿಕೊಳ್ಳುತ್ತಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) :– ಮಾನ್ಯ ಸಭಾಧ್ಯಕ್ಷರೆ, ಈ ವಿಷಯವನ್ನು ನಿಲುವಳಿ ಸೂಚನೆ ಮೂಲಕ ಪ್ರಸ್ತಾಪ ಮಾಡಿದಾಗ ಅದಕ್ಕೆ ಸಿಗುವಂಥ ಮಹತ್ವ, ತಾವು ನಮ್ಮ ಎಲ್ಲಾ ವಿಚಾರಗಳನ್ನು ಕೇಳಿದ ಮೇಲೆ ಇದು ನಿಲುವಳಿ ಸೂಚನೆಗೆ ಯೋಗ್ಯವಲ್ಲವೆಂದು ಹೇಳಿದರೆ ತಮ್ಮ ತೀರ್ಪಿಗೆ ನಾನು ತಲೆಬಾಗುತ್ತೇನೆ. ಆದರೆ ಇದರ ಮಹತ್ವ ಏನು ಎಂದು ತಿಳಿಸುವ ಪ್ರಯತ್ನವನ್ನು ನಾವೆಲ್ಲಾ ಮಾಡುತ್ತೇವೆ. ನಿಲುವಳಿ ಸೂಚನೆ ಮೂಲಕ ಬೇರೆ ಎಲ್ಲಾ ಕಾರ್ಯಕಲಾಪಗಳನ್ನು ಬದಿಗೊತ್ತಿ ಚರ್ಚೆ ಮಾಡಿದರೆಂದಾಗ ಈ ರಾಜ್ಯದ ರೈತರ ಸಮೂಹ ಏನು ಬರ ಸಂಕಷ್ಟಕ್ಕೆ ಸಿಲುಕಿ ನರಳುತ್ತಿದ್ದಾರೆ. ಅವರು ನನಗೆ ಒಂದು ಪರಿಹಾರ ಸಿಗುತ್ತದೆ. ಇದರ ಬಗ್ಗೆ ಗಂಭೀರವಾದ ಚಿಂತನೆ ಸದನದಲ್ಲಿ ಆಯಿತು. ಪಕ್ಷಭೇದ ಮರೆತು ಒಟ್ಟಾಗಿ ಚರ್ಚೆ ಮಾಡಿದರು ಎನ್ನುವುದು ಇದು ಒಂದನೆಯದು. ಯಾವ ಪರಿಸ್ಥಿತಿಯಲ್ಲಿ ಇದ್ದೇವೆ? ಜೂನ್ 30ರ ಇವತ್ತು ನಾವೆಲ್ಲಾ ಸದನದಲ್ಲಿ ಸೇರುತ್ತಿದ್ದೇವೆ. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಮಳೆಯಾಗದೆ ಕೆರೆಕಟ್ಟೆಗಳು ಬತ್ತಿ ಹೋಗಿವೆ. ಚಿತ್ರದುರ್ಗ, ದಾವಣಗೆರೆ, ಬಳ್ಳಾರಿ, ತುಮಕೂರು, ರಾಯಚೂರು, ಗುಲ್ಬರ್ಗಾ, ಮೈಸೂರು, ಚಿಕ್ಕೋಡಿ ಎಲ್ಲಕ್ಕಿಂತ ಮುಖ್ಯವಾಗಿ ಕೋಲಾರ ಹೀಗೆ ಹೇಳುತ್ತಾ ಹೋದರೆ ಬಹಳಷ್ಟು ಇವೆ. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬಿತ್ತನೆಗೆ ಭೂಮಿಯನ್ನು ಹದಮಾಡಿಕೊಳ್ಳಲಿಕ್ಕೆ ಆಗಿಲ್ಲ. ಅಲ್ಪಸ್ವಲ್ಪ ಮಳೆ ಬಿದ್ದು ಎಲ್ಲಿ ಭೂಮಿಯನ್ನು ಹದ ಮಾಡಿದ್ದಾನೋ ಅಲ್ಲಿ ಬಿತ್ತನೆಗಾಗಿ, ಬಿತ್ತನೆ ಬೀಜಕ್ಕಾಗಿ ರಸಗೊಬ್ಬರಕ್ಕಾಗಿ ಮನೆ ಮನೆಗೆ ಅಲೆಯುತ್ತಿರುವ ಧಾರುಣ ಪರಿಸ್ಥಿತಿ ಇದೆ. ಏಕೆಂದರೆ 4 ವರ್ಷಗಳಿಂದ ತೀವ್ರತರವಾದ ಬರಗಾಲ ಪರಿಸ್ಥಿತಿಗೆ ಇವರು ತುತ್ತಾಗಿದ್ದರು. ಇಂಥ ವಿಶೇಷವಾದಂಥ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಈ ಅವಧಿಯನ್ನು ವಿಸ್ತರಣೆ ಮಾಡಿದಾಕ್ಷಣಕ್ಕೆ ಅವನಿಗೆ ನ್ಯಾಯ ಸಿಕ್ಕಿಬಿಡುತ್ತದೆ, ಅವನಿಗೆ ಏನೋ ಪರಿಹಾರ ಸಿಕ್ಕುತ್ತದೆನ್ನುವುದಕ್ಕೆ ನಾನು ನಿಂತಿಲ್ಲ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ

ಒತ್ತಾಯ ಮಾಡುವುದೇನೆಂದರೆ, ದಯವಿಟ್ಟು ಈ ರೀತಿಯ ಸವಲತ್ತಿನ ಘೋಷಣೆಯನ್ನು ನೀವು ಮಾಡಿದ ಮೇಲೆ 30–06–2005ರೊಳಗಾಗಿ ಸಹಕಾರಿ ಸಂಘದಿಂದ ಪಡೆದಿರುವಂಥ ಸಾಲದ ಮೇಲಿನ ಅಸಲನ್ನು ಪಾವತಿ ಮಾಡಿದರೆ ಸಂಪೂರ್ಣ ಬಡ್ಡಿ ಮನ್ನಾ ಮಾಡುತ್ತೇವೆಂದು ನೀವು ಘೋಷಣೆ ಮಾಡಿದ ಮೇಲೂ ಸಹ ಇವತ್ತು ಈ ರಾಜ್ಯದಲ್ಲಿ ಒಟ್ಟು 10 ಲಕ್ಷದ 40 ಸಾವಿರದ 668 ಜನ ರೈತರು ಸಾಲ ಪಡೆದಿದ್ದಾರೆ. ಮೇ ಕೊನೆಯವರೆಗೆ 2 ಲಕ್ಷದ 15 ಸಾವಿರದ 619 ರೈತರು ಮಾತ್ರ ಈ ಪ್ರಯೋಜನವನ್ನು ಪಡೆದುಕೊಂಡು ಅಸಲನ್ನು ಕಟ್ಟಿದ್ದಾರೆ. ಜೂನ್ ತಿಂಗಳನ್ನು ಸೇರಿಸಿಕೊಂಡರೆ ಬಹುಶಃ ಆ ಸಂಖ್ಯೆ 10 ಲಕ್ಷದ 40 ಸಾವಿರದ 668 ರೈತರ ಪೈಕಿ ಅದು 3 ಲಕ್ಷ ದಾಟುವುದಿಲ್ಲ. ಒಟ್ಟು ಸಾಲ 1933 ಕೋಟಿ ರೂ.ಪಡೆದಿದ್ದರೆ ಅದರಲ್ಲಿ ಇದುವರೆಗೆ 400 ರಿಂದ 450 ಕೋಟಿ ರೂ. ಅವನು ಪಾವತಿ ಮಾಡಿಲ್ಲ. ಅಂದರೆ ಯಾವ ಧಾರುಣ ಪರಿಸ್ಥಿತಿಯಲ್ಲಿ ಅವನಿದ್ದಾನೆಂದು ಈ ಅಂಕಿಅಂಶ ಬಹಳ ಸ್ಪಷ್ಟವಾಗಿ ತೋರಿಸುತ್ತಿದೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಒತ್ತಾಯ ಮಾಡುವುದೇನೆಂದರೆ, ಈ ರೀತಿ ರೈತ ದಯಾನೀಯ ಸ್ಥಿತಿಯಲ್ಲಿರಬೇಕಾದರೆ ಈ ಪರಿಸ್ಥಿತಿಗೆ ಕಾರಣವೇನು? ತಜ್ಞರ ಒಂದು ಸಮಿತಿಯನ್ನು ಮಾಡಿ ಒಂದು ವರದಿಯನ್ನಾದರೂ ತರಿಸಿಕೊಳ್ಳುವಂಥ ಪ್ರಯತ್ನವನ್ನು ಮಾಡಬಹುದೆ? ರೈತನ ವಾಸ್ತವಿಕ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೆ, ಏನೋ ಕಿಂಚಿತ್ತು ಸವಲತ್ತನ್ನು ಘೋಷಣೆ ಮಾಡಿದ ಮೇಲೆ ಅವನು ನೆಮ್ಮದಿಯಿಂದ ಇರುತ್ತಾನೆ ಎನ್ನುವ ಭ್ರಮೆಯಲ್ಲಿ ನಾವು ಇರುವಂಥದ್ದು ಬಹುಶಃ ನಮಗ್ಯಾರಿಗೂ ಗೌರವ ತರುವಂಥದ್ದಲ್ಲ ಶೋಭೆ ತರುವಂಥದ್ದಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ, ಬಹಳ ಆಶ್ಚರ್ಯಕರ ಸಂಗತಿ ಮತ್ತು ನಾವು ಗಮನಿಸಬೇಕಾದ ಸಂಗತಿ ಎಂದರೆ ಮೊನ್ನೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಭೆಯಲ್ಲಿ ಸ್ವತಃ ಮಾನ್ಯ ಪ್ರಧಾನಿಯವರೇ ಕೃಷಿ ವಲಯದ ಪ್ರಗತಿ ಬಗ್ಗೆ ಚಿಂತಿತರಾಗಿ ಗ್ರಾಮೀಣ ಪ್ರದೇಶಗಳಲ್ಲಿ ಬಡ ಜನರು ಸೌಲಭ್ಯಗಳಿಂದ ವಂಚಿತರಾಗುತ್ತಿರುವುದಕ್ಕೆ ಕಾರಣ ರೈತ ಸಂಕಷ್ಟದಲ್ಲಿರುವಂಥದ್ದು ಎನ್ನುವ ಆತಂಕವನ್ನು ಅವರು ವ್ಯಕ್ತಪಡಿಸಿದ್ದಾರೆ. ಇಂಥ ಒಂದು ಸಂದರ್ಭದಲ್ಲಿ ರಾಜ್ಯದ ರೈತ ಸಮೂಹವನ್ನು ಉಳಿಸುವುದಕ್ಕೆ ಏನಾದರೂ ಪ್ರಮುಖ ನಿರ್ಧಾರಗಳನ್ನು ನಾವು ತೆಗೆದುಕೊಳ್ಳದಿದ್ದರೆ ಬಹುಶಃ ಈ ವ್ಯವಸ್ಥೆಯೇ ಬುಡಮೇಲಾಗುತ್ತದೆ. ಕೃಷಿಕಾರ್ಯ ಬೇಡ ಎಂದು ಹೇಳಿ ಇದರಿಂದ ಹೊರಬರುವಂಥ ಪರಿಸ್ಥಿತಿ ತಲೆದೋರಬಹುದೆನ್ನುವ ಭಯ ನಮ್ಮನ್ನು ಕಾಡುತ್ತಿದೆ. ಆದ್ದರಿಂದ ಪ್ರಮುಖವಾದ ಎರಡುಮೂರು ವಿಷಯಗಳ ಬಗ್ಗೆ ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ, ಈ ಸಹಕಾರಿ ಸಂಘದ ಸಾಲದ ಹಣವನ್ನು ಮರುಪಾವತಿ ಮಾಡುವ ಅವಧಿಯನ್ನು ಮುಂದಿನ ವರ್ಷದ ಮಾರ್ಚ್ ತಿಂಗಳ ಕೊನೆಯವರೆಗೆ ನೀವು ವಿಸ್ತರಣೆ ಮಾಡಬೇಕೆನ್ನುವುದು ನನ್ನ

ಆಗ್ರಹವಾಗಿದೆ. ಏಕೆಂದರೆ ಈಗ ಅಲ್ಪಸ್ವಲ್ಪ ಬೆಳೆ ಬೆಳೆದು ಆಗಲಾದರೂ ಅಸಲನ್ನು ಕಟ್ಟುವಂಥ ಶಕ್ತಿ ಅವನಿಗೆ ಬರಹುದು. 4 ವರ್ಷದ ಬರಗಾಲಕ್ಕೆ ತುತ್ತಾಗಿರುವಂತ ರೈತ ಧಾರುಣ ಸ್ಥಿತಿಯಲ್ಲಿದ್ದಾನೆ. ಇವತ್ತು ನಾನು ಮಾನ್ಯ ಸಹಕಾರ ಸಚಿವರಾದ ಶ್ರೀ ದೇಶಪಾಂಡೆಯವರಿಗೆ ಅಭಿನಂದನೆಯನ್ನು ಸಲ್ಲಿಸುತ್ತೇನೆ. ಅವರೂ ಸಹ ಇದರ ಬಗ್ಗೆ ಆತಂಕಿತರಾಗಿ ಇದರ ಬಗ್ಗೆ ಚಿಂತನೆ ಮಾಡಬೇಕೆನ್ನುವ ವಿನಂತಿಯನ್ನು ಸಹ ಸರ್ಕಾರಕ್ಕೆ ಮಾಡಿದ್ದಾರೆನ್ನುವ ಮಾಹಿತಿ ಸಹ ನನಗಿದೆ. ಆದ್ದರಿಂದ ಇಲ್ಲಿ ಪಕ್ಷಭೇದ ಮರೆತು ಪ್ರಾಮಾಣಿಕವಾಗಿ ರೈತರ ಸ್ಥಿತಿ ಬಗ್ಗೆ ಸರಿಯಾದ ಅಧ್ಯಯನ ಮಾಡಿ ತಜ್ಞರನ್ನು ಕಳುಹಿಸಿಕೊಟ್ಟು ಮತ್ತು ಅದಕ್ಕೆ ಶಾಶ್ವತವಾದ ಪರಿಹಾರವನ್ನು ಹುಡುಕುವ ಪ್ರಯತ್ನವನ್ನು ನೀವು ಮಾಡಬೇಕು. ಆ ಹಿನ್ನೆಲೆಯಲ್ಲಿ ಈ ಸಾಲ ಮರುಪಾವತಿ ಮಾಡುವ ಅವಧಿಯನ್ನು ಮುಂದಿನ ವರ್ಷದ ಮಾರ್ಚ್ ಕೊನೆಯವರೆಗೆ ವಿಸ್ತರಣೆ ಮಾಡಬೇಕು ಇದು ಮೊದಲನೆಯದು. ಎರಡನೇಯದು, ಬರಗಾಲದಿಂದ ರಾಜ್ಯ ತತ್ತರಿಸಿ ಹೋಗಿದೆ ಎಂದು ಕಳೆದ ವರ್ಷ ಕೇಂದ್ರ ಸರ್ಕಾರಕ್ಕೆ ನೀವು ಒಂದು ವರದಿ ಕೊಟ್ಟಿರುವಂಥದ್ದು, ಹಾಗಾದರೆ 01–04–2004 ರಿಂದ 31–03–2005ರವರೆಗೆ ಏನು ರೈತ ಅಲ್ಪಸ್ವಲ್ಪ ಸಾಲ ಪಡೆದಿದ್ದಾನೆ. ಅವನು ಹೇಗೆ ಸಾಲ ಮರುಪಾವತಿ ಮಾಡುವುದಕ್ಕೆ ಸಾಧ್ಯವಿದೆ? ಆದ್ದರಿಂದ ಈ ಬಡ್ಡಿ ಮನ್ನಾ ವ್ಯವಸ್ಥೆಯನ್ನು 01–04–2004 ರಿಂದ 31–03–2005ರವರೆಗೆ ಸಾಲ ಪಡೆದಿರುವಂಥ ರೈತನಿಗೂ ಅನ್ವಯ ಮಾಡಬೇಕು. ಇದು ನನ್ನ ಎರಡನೆಯ ಒತ್ತಾಯವಾಗಿದೆ. ಇನ್ನು ಯಾರು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲವನ್ನು ಪಡೆದಿದ್ದಾರೆ. 30 ರಿಂದ 35 ಪರ್ಸೆಂಟ್‌ರಷ್ಟು ನಮ್ಮ ರಾಜ್ಯದ ರೈತರು ರಾಷ್ಟ್ರೀಕೃತ ಬ್ಯಾಂಕುಗಳಿಂದ ಸಾಲವನ್ನು ಪಡೆದಿದ್ದಾರೆ. ಅವರೂ ಕೂಡ ರೈತರೇ ಆಗಿದ್ದಾರೆ. ಪಕ್ಕದಲ್ಲಿ Co-operative institution ನಿಂದ ಸಾಲ ಪಡೆದಿದ್ದರೆ ಅಂಥವರಿಗೆ ಬಡ್ಡಿ ಮನ್ನಾ ಇನ್ನೊಬ್ಬ ಪಕ್ಕದಲ್ಲಿರುವ ರೈತ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಸಾಲ ಪಡೆದಿದ್ದರೆ ಅವನಿಗೆ ಬಡ್ಡಿ ಮನ್ನಾ ಇಲ್ಲ. ನಾನು ಕೇಳುವುದೇನೆಂದರೆ, ಕೇಂದ್ರ ಸರ್ಕಾರದ ಮನವೊಲಿಸಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ಪಡೆದಂಥ ರೈತನ ಸಾಲದ ಸಂಪೂರ್ಣ ಬಡ್ಡಿಯನ್ನು ಮನ್ನಾ ಮಾಡುವಂಥದ್ದು, ಆ ರೀತಿ ಆಗುವಂತೆ ನೋಡಿಕೊಳ್ಳಬೇಕಾದದ್ದು ನಮ್ಮ ರಾಜ್ಯ ಸರ್ಕಾರದ ಕರ್ತವ್ಯವಲ್ಲವೇ? ಸರ್ಕಾರದ ಕರ್ತವ್ಯವಾಗಿರುವುದರಿಂದ ಆ ಕಡೆಗೆ ತಾವು ವಿಶೇಷ ಗಮನ ಕೊಡಬೇಕು. ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಮಂತ್ರಿಮಂಡಲದ ಸಭೆಯಲ್ಲಿ ಚರ್ಚೆ ಮಾಡಿ ಈ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಗೆ ಹೋಗಿದ್ದರೆ ಹೆಚ್ಚು ಲಾಭವಾಗುತ್ತಿತ್ತು ಎನ್ನುವುದು ನನ್ನ ಸಲಹೆಯಾಗಿದೆ. ಏಕೆಂದರೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ 4 ವರ್ಷಗಳಿಂದ ಸತತವಾಗಿ ಬರಗಾಲಕ್ಕೆ ತುತ್ತಾದಂಥ ರೈತರ ಬಗ್ಗೆ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದಂಥ ಸಾಲದ ಮೇಲೆ ಸಹ ಕೊನೆಯ ಪಕ್ಷ ಬಡ್ಡಿ ಮನ್ನಾ ಮಾಡಬೇಕೆನ್ನುವ

ನಿವೇದನೆಯನ್ನು ಆ ಮುಖ್ಯಮಂತ್ರಿಗಳು ಸಮಕ್ಷಮ ಮಾನ್ಯ ಪ್ರಧಾನಿಯವರ ಮನವೊಲಿಸುವಂಥ ಪ್ರಯತ್ನ ಮಾಡಿದ್ದರೆ ಇದರಿಂದ ರೈತರಿಗೆ ಹೆಚ್ಚು ಲಾಭವಾಗುತ್ತಿತ್ತು. ಆ ಪ್ರಯತ್ನ ಮಾಡುವಂತೆ ಸಚಿವ ಸಂಪುಟದ ಸದಸ್ಯರೂ ಯೋಚನೆ ಮಾಡಬೇಕಾಗಿತ್ತು. ಮುಖ್ಯಮಂತ್ರಿಗಳೂ ಆ ರೀತಿ ಆಗಬೇಕೆನ್ನುವ ಆಗ್ರಹ ಮಾಡಿ ಈ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಇದನ್ನು ಒತ್ತಾಯ ಮಾಡುವ ಪ್ರಯತ್ನ ಮಾಡಬೇಕಾಗಿತ್ತು. ಒಂದು ಸಂತೋಷದ ಸಂಗತಿ ಏನೆಂದರೆ, ಆಂಧ್ರಪ್ರದೇಶದ ಮುಖ್ಯಮಂತ್ರಿಗಳು, ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಸಾಲಕ್ಕೂ ಸಹ 6 ಪರ್ಸೆಂಟ್ ಬಡ್ಡಿಯನ್ನು ಹಾಕಬೇಕು ಎಂಬ ಒಂದು ಮಾತನ್ನು ಅಲ್ಲಿ ಹೇಳಿದ್ದಾರೆ. ಇವತ್ತು ನಾನು ಮುಖ್ಯಮಂತ್ರಿಗಳನ್ನು ವಿನಂತಿ ಮಾಡುತ್ತೇನೆ. ಒಂದು ಸರ್ವಾನುಮತ ನಿರ್ಣಯವನ್ನು ಮಾಡೋಣ. ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ರೈತನ ಸಾಲವನ್ನು ಸಂಪೂರ್ಣ ಬಡ್ಡಿಯನ್ನು ಮನ್ನಾ ಮಾಡುವಂಥ ಒಂದು ನಿರ್ಣಯವನ್ನು ಮುಂದೆ ಬರುವಂಥ ದಿವಸಗಳಲ್ಲಿ ಅಲ್ಪಾವಧಿ ಸಾಲವಾಗಲಿ, ದೀರ್ಘಾವಧಿ ಸಾಲವಾಗಲೀ, ಅವನು ಮನೆ ಕಟ್ಟುವುದಕ್ಕೆ ಹಣವನ್ನು ತೆಗೆದುಕೊಳ್ಳುವುದಿಲ್ಲ. ಆ ಎಲ್ಲಾ ರೀತಿಯ ಸಾಲಕ್ಕೂ 6 ಪರ್ಸೆಂಟ್, ಬಡ್ಡಿಯಂತೆ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಸಾಲ ಸಿಗಬೇಕು ಎನ್ನುವ ನಿರ್ಣಯವನ್ನು ನಾವು ಮಾಡದಿದ್ದರೆ, ಬರೀ ನಿರ್ಣಯವಲ್ಲ, ಪ್ರಧಾನಿಯವರ ಮನವೊಲಿಸಿ ಈ ರೀತಿ ಒಂದು ಪರಿಹಾರವನ್ನು ಈ ರಾಜ್ಯದ ರೈತರಿಗೆ ದೊರಕಿಸುವ ಪ್ರಯತ್ನ ಮಾಡದಿದ್ದರೆ, ಬಹುಶಃ ಈ ವ್ಯವಸ್ಥೆಯೇ ತಿರುಗು-ಮುರುಗು ಆಗಬಹುದು. ಪ್ರಧಾನಿಯವರು ಈ ಕಳಕಳಿಯನ್ನು ವ್ಯಕ್ತಪಡಿಸುತ್ತಿರುವ ಈ ಕಾಲದಲ್ಲಿ ನಾವು ಈ ಕಡೆ ಸರ್ವಾನುಮತದ ನಿರ್ಣಯ ಮಾಡಿ, ನಿಮ್ಮ ಪ್ರಭಾವ ಬೀರಿ ಈ ರಾಜ್ಯದ ರೈತರ ಉಳಿವಿಗೆ ನೀವು ಮುಂದೆ ಬರಬೇಕು. ಆ ರೀತಿ ಸರ್ವಾನುಮತದ ನಿರ್ಣಯವನ್ನು ಇಲ್ಲಿ ಮಾಡಬೇಕು ಎನ್ನುವ ಒತ್ತಾಯವನ್ನು ಈ ಸಂದರ್ಭದಲ್ಲಿ ನಾನು ಮಾಡುತ್ತಿದ್ದೇನೆ. ಇನ್ನೊಂದು ವಿನಂತಿಯನ್ನು ನಾನು ಮಾಡುವುದೇನೆಂದರೆ, ಯಾರು ಮರ್ಯಾದೆಗೆ ಅಂಜಿ ಹಣ ಇರಲಿ, ಇಲ್ಲದಿರಲಿ ಪ್ರಾಮಾಣಿಕವಾಗಿ ಯಾರು ಸಾಲ ಕಟ್ಟಿದ್ದಾನೋ, ಬಡ್ಡಿ ಕಟ್ಟಿದ್ದಾನೋ ಈ ಒಂದು ಸವಲತ್ತು ಸಿಕ್ಕದಿರುವ ಸಂದರ್ಭದಲ್ಲಿ ಯಾವ ರೈತರು, ಅಸಲು, ಬಡ್ಡಿ ಕಟ್ಟಿದ್ದಾರೆ, ಆ ಬಡ್ಡಿಯನ್ನು ಅವನಿಗೆ ವಾಪಸ್ಸು ಕೊಡುವಂಥ ವ್ಯವಸ್ಥೆಯನ್ನು ಸಹ ಸರ್ಕಾರ ಮಾಡಬೇಕೆನ್ನುವ ಒತ್ತಾಯವನ್ನು ನಾನು ಮಾಡುತ್ತಿದ್ದೇನೆ. ಸನ್ಯಾನ್ಯ ಮುಖ್ಯಮಂತ್ರಿಗಳು ಇಲ್ಲೇ ಇದ್ದಾರೆ. ಟೆನ್ತ್ ಫೈನಾನ್ಸ್ ಕಮೀಷನ್‌ನವರು ಇಲ್ಲಿ ಬಂದಾಗ, ನಮ್ಮ ರಾಜ್ಯದ ಹಣಕಾಸಿನ ಸಚಿವರು ಸರ್ಕಾರದ ಪರವಾಗಿ ಒಂದು ವಿನಂತಿಯನ್ನು ಮಾಡಿದ್ದಾರೆ. ಏನೆಂದರೆ, ಸತತ 4 ವರ್ಷಗಳು ಬರಗಾಲಕ್ಕೆ ತುತ್ತಾಗಿರುವಂಥ ಈ ರೈತರು ಉಳಿಯಬೇಕೆಂದು ಇದ್ದರೆ, ಒನ್ ಟೈಂ ರಾಜ್ಯದ ರೈತನ ಸಾಲವನ್ನು ಮನ್ನಾ ಮಾಡಬೇಕು ಎಂಬ ಮಾತನ್ನು

ನಾನಲ್ಲ. ಹಣಕಾಸಿನ ಸಚಿವರಾಗಿ ಉಪ ಮುಖ್ಯಮಂತ್ರಿಗಳು ಫೈನಾನ್ಸ್ ಕಮಿಷನ್‌ನವರು ಬೆಂಗಳೂರಿಗೆ ವಿಸಿಟ್ ಮಾಡಿದ ಸಂದರ್ಭದಲ್ಲಿ ತಾವೆಲ್ಲಾ ಒಟ್ಟಾಗಿ ಫೈನಾನ್ಸ್ ರೆಪ್ರೆಸೆಂಟೇಟಿವ್ಸ್‌ಗೆ ಈ ಒತ್ತಾಯವನ್ನು ಮಾಡಿದ್ದೀರಿ. ಹಾಗಾದರೆ, ನಿಮಗೆ ನಾನು ಬಹಳ ಸ್ಪಷ್ಟವಾಗಿ, ರಾಜ್ಯದ ರೈತನ ಸ್ಥಿತಿ ಸರಿಯಿಲ್ಲವೆಂದು ಮನವರಿಕೆಯಾದ ಮೇಲೆ, ನೀವು ಈ ವಿಚಾರವನ್ನು ಚಿಂತನೆ ಮಾಡಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ನಮ್ಮ ರಾಜ್ಯದ ರೈತರ ಪರವಾಗಿ ಸರಿಯಾದ ರೀತಿ ವಿಚಾರವನ್ನು ಮಂಡನೆ ಮಾಡುವುದರಲ್ಲಿ ನಮ್ಮ ಸರ್ಕಾರ, ಮುಖ್ಯಮಂತ್ರಿಗಳು ವಿಫಲರಾಗಿದ್ದಾರೆ ಎನ್ನುವ ಮಾತನ್ನು ಅನಿವಾರ್ಯವಾಗಿ ಇಲ್ಲಿ ಹೇಳಬೇಕಾಗುತ್ತದೆ. ಹಾಗಾಗಿ, ಈಗಲಾದರೂ ಸಹ, ಒಂದು ಸರ್ವಾನುಮತದ ನಿರ್ಣಯವನ್ನು ಮಾಡಿ ಈ ಒತ್ತಾಯವನ್ನು ದೇಶದ ಪ್ರಧಾನಿಯವರಿಗೆ ತಂದು, ಈ ಸವಲತ್ತನ್ನು ದೇಶದ, ರಾಜ್ಯದ ರೈತರ ಸಮೂಹಕ್ಕೆ ಸಿಗುವಂಥ ವ್ಯವಸ್ಥೆ ಮಾಡಬೇಕೆನ್ನುವ ಒತ್ತಾಯವನ್ನು ಮಾಡುವುದಕ್ಕೋಸ್ಕರ ನಾನು ಇಲ್ಲಿ ವಿನಂತಿ ಮಾಡುತ್ತಿದ್ದೇನೆ. ಇವತ್ತು ನಾನು ಕೆಲವು ತಜ್ಞರನ್ನು ಕಳುಹಿಸಿ ಒಂದು ಸಮೀಕ್ಷೆ ಮಾಡಿಸಿ ಎಂದು ಹೇಳಿದೆ. ನಾವು ಇವತ್ತು ಯಾವ ಪರಿಸ್ಥಿತಿಯಲ್ಲಿದ್ದೇವೆ? ಕೆಲವು ಜಿಲ್ಲೆಗಳಲ್ಲಿ ಬಿತ್ತನೆಗೆ ಭೂಮಿಯನ್ನು ಸಿದ್ಧ ಮಾಡುವುದಕ್ಕಾಗಲಿಲ್ಲ. ಅದು ಕೋಲಾರ, ದಾವಣಗೆರೆ, ಚಿತ್ರದುರ್ಗ ಇರಬಹುದು. ಬಹುತೇಕ ಮಳೆ ಆಗಿಲ್ಲ. ಭೂಮಿ ಒದ್ದೆಯಾಗಿಲ್ಲ. ಭೂಮಿ ಹದ ಮಾಡಿಲ್ಲ. ಉಳಿದ ಕಡೆ ಸ್ವಲ್ಪ ಖುಷ್ಕಿ ಬಿತ್ತನೆ. ಜೋಳವನ್ನು ಪ್ರಾರಂಭ ಮಾಡಿದ್ದಾರೆ. ಆ ಜೋಳದ ಬಿತ್ತನೆಗೆ ಬೇಕಾದ ರಸಗೊಬ್ಬರ, ಬಿತ್ತನೆ ಬೀಜಕ್ಕೆ ಇನ್ನೊಬ್ಬರ ಮನೆಗೆ ಸಾಲಕ್ಕೆ ಹೋಗುವಂಥ ಸಂದರ್ಭದಲ್ಲಿ ನಾವು ಆ ರೈತನಿಂದ ಅಸಲನ್ನು ಕಟ್ಟಬಹುದೆನ್ನುವ ನೀರಿಕ್ಷೆ ಮಾಡಿದ್ದೆವು. ಇದು ರಾಜಕಾರಣಕ್ಕಾಗಿ ಒತ್ತಾಯ ಮಾಡುವುದಕ್ಕೋಸ್ಕರ, ಪ್ರತಿಪಕ್ಷವಾಗಿ ಇಲ್ಲಿ ನಿಂತುಕೊಂಡು ನಾನು ಮಾತನಾಡುತ್ತಿಲ್ಲ. ಇಲ್ಲಿ ಆ ಕಡೆ, ಈ ಕಡೆ ಭೇದಭಾವ ಬಿಟ್ಟು ಈ ರಾಜ್ಯದ ರೈತ ಸಮೂಹವನ್ನು ಉಳಿಸುವ ಕಡೆ ನಾವು ವಿಶೇಷ ಗಮನ ಕೊಡದಿದ್ದರೆ, ಬಹುಶಃ ಬರುವಂಥ ದಿವಸಗಳು ಬಹಳ ಕಷ್ಟದ, ಕೆಟ್ಟ ದಿವಸಗಳಾಗಬಹುದು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ರೈತನ ಹೊಲಕ್ಕೆ ನೀರಿಲ್ಲ. ರೈತ ಬೆಳೆದ ಬೆಳೆಗೆ ಸರಿಯಾದ ಬೆಂಬಲ ಬೆಲೆಯನ್ನು ವೈಜ್ಞಾನಿಕವಾಗಿ ಕೊಡುವುದಕ್ಕಾಗಲಿಲ್ಲ. ಕೇಂದ್ರ ಸರ್ಕಾರ ಬೆಂಬಲ ಬೆಲೆ ಘೋಷಣೆ ಮಾಡಿದರೂ ಸಹ, ಅದರಂತೆ ನೀವು ಖರೀದಿ ಮಾಡುವಂತ ಪ್ರಯತ್ನ ಮಾಡಿಲ್ಲ. ರೈತ ಸಮೂಹವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿದ್ದೀರಿ. ಬೆಳೆ ವಿಮೆ ಬಗ್ಗೆ ಅಂತೂ ಆ ದೇವರೇ ನಮ್ಮನ್ನು ಕಾಪಾಡಬೇಕು. ಇವತ್ತು ನಿಮ್ಮ ಕೃಷಿ ಇಲಾಖಾಧಿಕಾರಿಗಳಿಗೆ, ನಿಮ್ಮ ಅಧಿಕಾರಿಗಳಿಗೆ ಬೆಳೆ ವಿಮೆ ಎಂದರೇನು, ಅದರ ಹಿನ್ನೆಲೆ ಏನು? ಅದನ್ನು ಯಾವ ರೀತಿ ಕಾರ್ಯರೂಪಕ್ಕೆ ತರಬೇಕು, ಎಂಬ ಬಗ್ಗೆ ಚಿಂತನೆ ಮಾಡುವುದು, ಸರಿಯಾದ

ಮಾಹಿತಿ ಪಡೆಯುವಂಥದ್ದು ಅದನ್ನೇನೂ ಮಾಡದೆ ಈ ರಾಜ್ಯದ ರೈತ ಸಮೂಹ ಸರ್ವನಾಶವಾಗುತ್ತಿದೆ. ನಾನು ವಿವರಕ್ಕೆ ಆಮೇಲೆ ಬರುತ್ತೇನೆ. ಮುಖ್ಯಮಂತ್ರಿಗಳೇ, ಇವತ್ತು ನಮ್ಮ ಬಾಗಲಕೋಟೆ ಸ್ನೇಹಿತರು ಸಿಕ್ಕಿದ್ದರು. ಅಲ್ಲಿ ಸೂರ್ಯಕಾಂತಿಗೆ ಬೆಳೆ ವಿಮೆ ಮಾಡಿಸಿದ್ದಾರೆ. ಅವರು ಹಣ ಕಟ್ಟಿದ್ದಾರೆ. ಬೆಳೆ ವಿಮೆಗೆ ಅದರಲ್ಲಿ ಅಳವಡಿಸಿಕೊಳ್ಳಿ ಎಂದು ರೈತರಿಗೆ ಹೇಳಿದ್ದಾರೆ. ಈಗ ಹಣ ಕಟ್ಟಿ ಎಲ್ಲಾ ಅದಮೇಲೆ, ಪರಿಹಾರ ಕೊಡುವ ಕಾಲದಲ್ಲಿ ಬೆಳೆ ವಿಮೆ ಸೂರ್ಯಕಾಂತಿಗೆ ಅನ್ವಯವಾಗುವುದಿಲ್ಲವೆಂದು ಹೇಳುತ್ತಾರೆನ್ನುವ ಇದೊಂದು ಸಣ್ಣ ಉದಾಹರಣೆಯನ್ನು ನಾನು ಕೊಡುತ್ತಿದ್ದೇನೆ. ಯಾವ ರೀತಿ ರೈತ ಸಮೂಹದ ಬಗ್ಗೆ ನಿರ್ಲಕ್ಷ್ಯ ತಾಳುತ್ತಿದ್ದೇವೆ ಎನ್ನುವುದಕ್ಕೆ ನಾನೊಂದು ಉದಾಹರಣೆ ಕೊಡುತ್ತಿದ್ದೇನೆ. ಎಲ್ಲಾ ರಂಗದಲ್ಲಿ ನಾವು ವೈಫಲ್ಯವನ್ನು ಕಾಣುತ್ತಿದ್ದೇವೆ. ನಮ್ಮ ಕೃಷಿ ಸಚಿವರು ಇಲ್ಲಿ ಇದ್ದಾರೆ. ಜತನಾ ದಳದ ಚುನಾವಣೆ ಪ್ರಣಾಳಿಕೆಯನ್ನು ಈ ಸಂದರ್ಭದಲ್ಲಾದರೂ ಓದಿ. ಏಕೆಂದರೆ, ಮಂತ್ರಿಗಳಾದಾಗ ಬಿಜಿ ಇರುತ್ತೀರಿ. ಬಿಡುವಾಗುವುದಿಲ್ಲ. ಈಗ ಓದಿದರೆ ಬಹುಶಃ ನಿಮಗೆ ಅರ್ಥವಾಗಬಹುದು.

ಶ್ರೀ ಕೆ. ಶ್ರೀನಿವಾಸ ಗೌಡ (ಕೃಷಿ ಸಚಿವರು) :– ನಾನು ಕಾಂಗ್ರೆಸ್ ಪಕ್ಷದ ಮಂತ್ರಿ. ಜನತಾದಳದ್ದು ನೋಡಿ ಎಂದು ನನಗೆ ಏಕೆ ಹೇಳುತ್ತೀರಿ?

ಶ್ರೀ ಬಿ.ಎಸ್. ಯಡಿಯೂರಪ್ಪ :– ಎರಡೂ ಓದಿ ಅದಕ್ಕೇನಂತೆ? ನಿಮ್ಮಿಬ್ಬರದೂ ಸಮ್ಮಿಶ್ರ ಸರ್ಕಾರ ತಾನೇ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನೀವು ಬದಲಾವಣೆ ಆಗಿರುವುದು ಅವರಿಗೆ ಗೊತ್ತಾಗಿಲ್ಲ.

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ವಿರೋಧ ಪಕ್ಷದ ನಾಯಕರು ಯೋಚನೆ ಮಾಡುವುದಕ್ಕೆ ಹೋಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :– ಯಾರು ಎಲ್ಲಿ ಇರುತ್ತಾರೆ ಎನ್ನುವುದು ಬಹಳ ಕನ್‌ಫ್ಯೂಸ್ ಆಗಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಆದುದರಿಂದ, ದಯವಿಟ್ಟು, ರೈತನ ಬಗ್ಗೆ ಸರಿಯಾದ ರೀತಿಯಲ್ಲಿ ತಾವು ಚಿಂತನೆ ಮಾಡಬೇಕು. ಸರ್ಕಾರ ಹೊಸ ಭರವಸೆ, ಸವಲತ್ತನ್ನು ನೀಡದಿದ್ದರೆ, ರೈತ ಸಮೂಹ ಬೀದಿ ಪಾಲಾಗುತ್ತದೆನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮ ವಿದ್ಯುತ್ ಇಲಾಖೆಯನ್ನು ನೋಡಿಕೊಳ್ಳುವ ಸಚಿವರಾದ ರೇವಣ್ಣನವರು ಇಲ್ಲಿ ಇದ್ದಾರೋ, ಇಲ್ಲವೋ ಗೊತ್ತಿಲ್ಲ. ನಾನು ಮುಖ್ಯಮಂತ್ರಿಗಳ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತಿದ್ದೇನೆ. ಇವತ್ತು ದೇಶದಲ್ಲಿ ಏನು ಚರ್ಚೆಯಾಗುತ್ತಿದೆ?

ನಾನು ನಿಮಗೆ ಅಭಿನಂದನೆ ಸಲ್ಲಿಸುತ್ತೇನೆ. ಕೋ-ಆಪರೇಟೀವ್ ಲೋನ್ಸ್‌ಗೆ 6 ಪರ್ಸೆಂಟ್ ಬಡ್ಡಿಯಲ್ಲಿ ಸಾಲದ ವ್ಯವಸ್ಥೆ ಮಾಡುವಂತ ದಿಟ್ಟ ಹೆಜ್ಜೆಯನ್ನು ಇಟ್ಟಿದ್ದೀರಿ. ಇಂಥ ಒಂದು ಸಂದರ್ಭದಲ್ಲಿ ಆಶ್ಚರ್ಯ ಎಂದರೆ, ಯಾವ ರೈತ ನೀರಾವರಿ ಇಲ್ಲದ ಕಡೆ ಪಂಪ್‌ಸೆಟ್ ಇಟ್ಟಿದ್ದಾನೆ. ಬೋರ್‌ವೆಲ್ ತೆಗೆದಿದ್ದಾನೆ. ನಿಮ್ಮ ಕಾಲದಲ್ಲಿ ತೆಗೆದು ನೋಡಿ, ಅವನು ಹಿಂದೆ ವರ್ಷಕ್ಕೊಮ್ಮೆ ಕೆಪಿಟಿಸಿಎಲ್ ಬಾಕಿ ಹಣ ಪಾವತಿ ಮಾಡುತ್ತಿದ್ದ. ಏಕೆಂದರೆ, ಅವನಿಗೆ ಬೇರೆ ವ್ಯಾಪಾರಸ್ಥರಂತೆ ಪ್ರತಿ ತಿಂಗಳೂ ಆದಾಯ ಬರುವುದಿಲ್ಲ. ದಿನನಿತ್ಯ ಅವನು ದುಡಿಮೆ ಮಾಡುವುದಿಲ್ಲ. ವರ್ಷಕ್ಕೊಮ್ಮೆ ಪಾವತಿ ಮಾಡುತ್ತಿದ್ದ. ಈಗೇನು ಮಾಡಿದಿರಿ, 3 ತಿಂಗಳಿಗೊಮ್ಮೆ ಆ ವಿದ್ಯುತ್ ಬಿಲ್ ಅನ್ನು ಅವನು ಕಟ್ಟಬೇಕು. ಕಟ್ಟದಿದ್ದರೆ ವಾಟಾಳ್ ನಾಗರಾಜ್‌ರವರೇ ಬಡ್ಡಿ ಎಷ್ಟು ಗೊತ್ತೆ? 24 ಪರ್ಸೆಂಟ್ ಬಡ್ಡಿ ಇದೆ. 3 ತಿಂಗಳಲ್ಲಿ ನಾನು 500 ರೂಪಾಯಿ ಬಾಕಿ ಕಟ್ಟಲಿಲ್ಲವೆಂದರೆ ಅದಕ್ಕೆ 24 ಪರ್ಸೆಂಟ್ ಬಡ್ಡಿ ಹಾಕಿ, ಬಡ್ಡಿ, ಅಸಲು ಸೇರಿಸಿ ಮುಂದಿನ ಸಾರಿ ಚಕ್ರ ಬಡ್ಡಿ ಹಾಕುವಂಥದ್ದು ಇದೆ. ಅದರ ಬದಲು, ರೈತರನ್ನು ನೇಣು ಹಾಕಿಬಿಡಿ. ನಾನು ಕೇಳುತ್ತೇನೆ, ಒಂದು ಕಡೆ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ 6 ಪರ್ಸೆಂಟ್ ಬಡ್ಡಿ ಸಿಗಬೇಕೆಂದು ಯೋಚಿಸುತ್ತಿದ್ದೇವೆ. ಮತ್ತೊಂದು ಕಡೆ, ರೈತನ ಸಾಲದ ಮೇಲೆ ಬಡ್ಡಿ ಮನ್ನಾ ಮಾಡುತ್ತೇವೆಂದು ನಾವು ಘೋಷಣೆ ಮಾಡಿದ್ದೇವೆ. ಮಗದೊಂದು ಕಡೆ, ಇವತ್ತು ರೈತನ ಕೆಪಿಟಿಸಿಎಲ್ ಬಿಲ್, ಸರಿಯಾಗಿ ವಿದ್ಯುತ್ ಕೊಡದೆ, ಅವನಿಗೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಬಡ್ಡಿಯನ್ನು ಹಾಕುವಂಥ ಕೆಲಸ ಮಾಡಿದ್ದೀರಲ್ಲಾ, ಅದು ಇವತ್ತು ಯಾರಿಗಾದರೂ ಶೋಭೆ ತರುವ ನೀತಿಯೇ? ರೈತರನ್ನು ಉದ್ಧಾರ ಮಾಡುವಂಥ ಸರ್ಕಾರ ನಡೆದುಕೊಳ್ಳುವ ರೀತಿಯೇ ಇದು? ನನಗೆ ಗೊತ್ತಿಲ್ಲ. ನಮ್ಮ ಮಂತ್ರಿಮಂಡಲದಲ್ಲಿರುವ ಸದಸ್ಯರಿಗೆ ಎಷ್ಟರಮಟ್ಟಿಗೆ ಈ ವಿಚಾರ ಗೊತ್ತಿದೆ ಎಂಬುದು ಗೊತ್ತಿಲ್ಲ. ನಾನು ಇವತ್ತು ಉತ್ತರ ಕೊಡುವಂಥ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳೇ, ಈ ನಿಮಿಷಕ್ಕೆ ನೀವು ಸ್ಪಷ್ಟವಾದ ಸರ್ಕಾರಿ ಆಜ್ಞೆಯನ್ನು ಹೊರಡಿಸಬೇಕು. ರೈತನ ಪಂಪ್‌ಸೆಟ್ ವಿದ್ಯುತ್ ಬಿಲ್ ಅನ್ನು ವರ್ಷಕ್ಕೊಮ್ಮೆ ಕಟ್ಟುವುದಕ್ಕೆ ಅವಕಾಶ ಕೊಡಬೇಕು. ಎರಡನೆಯದಾಗಿ ನಾಮಿನಲ್ ಆಗಿ ಇಂಟರೆಸ್ಟ್ ಹಾಕಬೇಕೇ ಹೊರತು, ನೀವು ಬಡ್ಡಿ, ಚಕ್ರ ಬಡ್ಡಿ, 2 ಪರ್ಸೆಂಟ್ ಬಡ್ಡಿ, 24 ಪರ್ಸೆಂಟ್ ಬಡ್ಡಿ ಹಾಕುವುದಕ್ಕಾಗುತ್ತದೆಯೇ? ದೊಡ್ಡ ದೊಡ್ಡವರು, ಹಿಂದೆ ರೈತನ ಶೋಷಣೆ ಮಾಡುತ್ತಿದ್ದವರು, ಈ ತರಹ ಸುಲಿಗೆ ಮಾಡುತ್ತಿದ್ದರು ಎನ್ನುವ ಮಾತನ್ನು ನಾವು ಕೇಳುತ್ತಿದ್ದೆವು. ಇವತ್ತು ಇದೇ ಕೆಲಸ ಮುಂದುವರಿಯುತ್ತದೆ ಎನ್ನುವುದಾದರೆ, ಬಹುಶಃ ನೀವು ಆ ಕಡೆ ಗಮನ ಕೊಡುವುದಕ್ಕಾಗುವುದಿಲ್ಲ. ಆ ಕಡೆ ವಿಶೇಷ ಗಮನ ಕೊಡಬೇಕು ಎನ್ನುವ ಒತ್ತಾಯವನ್ನು ಮಾಡುತ್ತಿದ್ದೇನೆ. ಈ ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಒಂದು ಸಾವಿರಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡರು. ಈಗಲೂ ಆತ್ಮಹತ್ಯೆ

ನಡೆಯುತ್ತಿದೆ. ಅವರೇಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ? ರೈತನ ಈ ದಯನೀಯ ಪರಿಸ್ಥಿತಿಗೆ ಏನು ಕಾರಣ ಎನ್ನುವುದನ್ನು ಅಧ್ಯಯನ, ಅಭ್ಯಾಸ ಮಾಡದಿದ್ದರೆ, ಪರಿಸ್ಥಿತಿ ಏನಾಗಬಹುದು? ಸನ್ಮಾನ್ಯ ಮುಖ್ಯಮಂತ್ರಿಗಳು ಗ್ರಾಮೀಣ ಪ್ರದೇಶದಿಂದ ಬಂದವರು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಸದನ ಸ್ವಲ್ಪ ಆರ್ಡರ್‌ನಲ್ಲಿಲ್ಲ. ದಯವಿಟ್ಟು, ನಿಲುವಳಿ ಸೂಚನೆ ಚರ್ಚೆಯಾಗುತ್ತಿದೆ. ಗಂಭೀರವಾಗಿ ಇದನ್ನು ಸದನ ಗಮನಿಸುವ ರೀತಿಯಲ್ಲಿ ತಾವು ಹತೋಟಿಗೆ ತರಬೇಕು ಎಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಕೆ. ಶ್ರೀನಿವಾಸಗೌಡ :– ಅವರೇ, ಇಲ್ಲಿ ಬಂದಿದ್ದರು. ಆಗ ಆರ್ಡರ್‌ನಲ್ಲಿತ್ತು. ಈಗ ಆರ್ಡರ್‌ನಲ್ಲಿಲ್ಲವೆಂದರೆ ಹೇಗೆ?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :– ನಾನು ಅಲ್ಲಿ ಬಂದಿದ್ದು ನಿಜ. ಏಕೆಂದು ಅವರಿಗೆ ಗೊತ್ತಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ, ನಾನು ಮುಖ್ಯಮಂತ್ರಿಗಳಿಗೆ ಏನು ಹೇಳುತ್ತೇನೆಂದರೆ, ನಾವು ಎಲ್ಲರೂ ಗ್ರಾಮೀಣ ಪ್ರದೇಶದಿಂದ ಬಂದಂಥವರು, ಮಾನ್ಯ ಹೆಚ್.ಕೆ. ಪಾಟೀಲ್‌ರವರು ಇಲ್ಲಿ ಇದ್ದಾರೆ. ನಾವು ಎಲ್ಲರೂ ರೈತರ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೇವೆ. ಹತ್ತು ವರ್ಷಗಳ ಹಿಂದೆ ಹಳ್ಳಿಗಳಿಗೆ ಹೋದರೆ ಆ ರೈತನ ಮನೆಯ ಮುಂದೆ ಒಂದು ಜೊತೆ ಎತ್ತು, ಒಂದೆರಡು ಎಮ್ಮೆ, ಒಂದೆರಡು ಆಕಳು, ಗಾಡಿ ಇಂಥ ಸುಂದರವಾದ ದೃಶ್ಯವನ್ನು ನಾವು ಎಲ್ಲರೂ ನೋಡುತ್ತಿದ್ದೆವು. ಮಾನ್ಯ ಕೃಷಿ ಸಚಿವರಿಗೂ ಕೂಡ ಈ ವಿಷಯ ಗೊತ್ತಿದೆ. ಇವತ್ತು ಏನಾಗಿದೆ ಸ್ವಾಮಿ? ಇವತ್ತು ಸಾಮಾನ್ಯವಾಗಿ ಶೇಕಡ 60 ರಷ್ಟು ರೈತರಿಗೆ ಒಂದು ಎಕರೆ, ಎರಡು ಎಕರೆ, ಎರಡೂವರೆ ಎಕರೆಗಿಂತ ಜಾಸ್ತಿ ಭೂಮಿ ಇಲ್ಲ. ಸಣ್ಣ, ಅತಿಸಣ್ಣ ರೈತರಿಗೆ ಇಷ್ಟು ಭೂಮಿ ಇರುವುದು ಮಾನ್ಯ ಕೃಷಿ ಸಚಿವರಾದ ತಮಗೆ ಗೊತ್ತಿರುವ ಸಂಗತಿಯಾಗಿದೆ. ರೈತ ಇವತ್ತು ಒಂದು ಎತ್ತನ್ನು ಸಾಕುವ ಸ್ಥಿತಿಯಲ್ಲಿ ಇಲ್ಲ. ಒಂದು ಎಮ್ಮೆಯನ್ನಾಗಲಿ ಒಂದು ಆಕಳನ್ನಾಗಲಿ ಸಾಕುವ ಸ್ಥಿತಿಯಲ್ಲಿ ಇಲ್ಲ. ತಾವು ಬೇಕಾದರೆ ಇವತ್ತು ಬನ್ನಿ ನಿಮ್ಮ ಜಿಲ್ಲೆಯಲ್ಲಿ ಏನೆಂಬುದು ಗೊತ್ತಿಲ್ಲ. ಶಿವಮೊಗ್ಗದಂಥ ಮಲೆನಾಡಿನಲ್ಲಿ ಬೇಸಾಯಕ್ಕೆ ಇವತ್ತು ಎರಡು ಎಕರೆ ಭೂಮಿಯನ್ನು ಸಿದ್ಧ ಮಾಡಬೇಕು ಎಂದರೆ, ನಾಲ್ಕು ದಿವಸವಾದರೂ ಬೇಸಾಯ ಮಾಡಿಸಬೇಕಾಗುತ್ತದೆ. ಮಾನ್ಯ ರಮೇಶ್ ಕುಮಾರ್‌ರವರೇ, ಒಂದು ಜೊತೆ ಎತ್ತುಗಳು ಬಂದು ಬೆಳಿಗ್ಗೆಯಿಂದ ಸಂಜೆಯವರೆಗೆ ಬೇಸಾಯ ಮಾಡುವುದಕ್ಕೆ ಕಡಿಮೆ ಎಂದರೂ 250 ರೂಪಾಯಿ ತೆಗೆದುಕೊಳ್ಳುತ್ತಾರೆ. ಇಷ್ಟು ದುಡ್ಡು ಕೊಟ್ಟರೂ ಸಿಗುವುದಿಲ್ಲ. ಒಂದು ಬೇಸಾಯಕ್ಕೆ 250

ರೂಪಾಯಿ ಕೊಡಬೇಕು. ಎರಡು ಎಕರೆ ಭೂಮಿ ಸಿದ್ಧ ಮಾಡುವುದಕ್ಕೆ ನಾಲ್ಕು ದಿವಸವಾದರೂ ಬೇಸಾಯ ಮಾಡಿಸಬೇಕು ಅಂದರೆ ಒಂದು ಸಾವಿರ ರೂಪಾಯಿ ಒಬ್ಬ ಸಣ್ಣ ಹಿಡುವಳಿದಾರ, ಒಬ್ಬ ಸಣ್ಣ ಅತಿ ಸಣ್ಣ ರೈತ ಉಳುಮೆಗೆ ಒಂದು ಸಾವಿರ ರೂಪಾಯಿ ದುಡ್ಡು ಕೊಡುತ್ತಾನೆ. ಅವನು ಪೆಸ್ಟಿಸೈಡ್ ಏನು ಹಾಕುತ್ತಾನೆ? ಬಿತ್ತನೆ ಬೀಜಕ್ಕೆ ಏನು ಖರ್ಚು ಮಾಡುತ್ತಾನೆ? ಗಂಡ ಹೆಂಡತಿ ಮಕ್ಕಳೆಲ್ಲಾ ಕೂಡಿಕೊಂಡು ಭೂಮಿಯಲ್ಲಿ ಕಳೆ ತೆಗೆದು ಫಲ ಪಡೆಯುವುದಕ್ಕೆ ಎಷ್ಟು ಶ್ರಮ ಹಾಕುತ್ತಾನೆ? ಇದಕ್ಕೆಲ್ಲಾ ಎಷ್ಟು ಖರ್ಚು ಆಗುತ್ತದೆ? ಇದು ಎಲ್ಲಾ ಬೇರೆ ವಿಷಯ. ಅಂದರೆ ಒಬ್ಬ ಸಾಮಾನ್ಯ ಅತಿ ಸಣ್ಣ ರೈತ ಕೃಷಿಗೆ ಭೂಮಿಯನ್ನು ಸಿದ್ಧ ಮಾಡುವುದಕ್ಕೆ ಇಷ್ಟು ದೊಡ್ಡ ಪ್ರಮಾಣದಲ್ಲಿ ಖರ್ಚು ಮಾಡುವ ಸಂದರ್ಭದಲ್ಲಿ ಕೂಲಿ ದುಬಾರಿಯಾಗುವ ಸಂದರ್ಭದಲ್ಲಿ ಆ ರೈತ ಹೇಗೆ ಬದುಕುತ್ತಾನೆ? ಆ ಸಣ್ಣ ರೈತ ಬದುಕುವುದು ಹೇಗೆ? ಒಂದೋ ಅವನು ಮಳೆಯ ಆಶ್ರಯದಲ್ಲಿ ಬೆಳೆ ಬೆಳೆಯಬೇಕು. ಯಾವ ಸಮಯದಲ್ಲಿ ಮಳೆ ಬರುತ್ತದೆ ಯಾವ ಸಮಯದಲ್ಲಿ ಹೋಗುತ್ತದೆ ಎಂಬುದು ಗೊತ್ತಿಲ್ಲ. ಅಕಸ್ಮಾತ್ ಅವನು ಬೆಳೆದರೂ ಅವನಿಗೆ ಒಳ್ಳೆಯ ಬೆಂಬಲ ಬೆಲೆ ಸಿಗುತ್ತದೆ ಎನ್ನುವ ಗ್ಯಾರಂಟಿ ಇಲ್ಲ. ಹೀಗಾಗಿ ಒಂದು ರೀತಿ ರೈತನ ಸ್ಥಿತಿ ಹದಗೆಡುತ್ತಿದೆ. 8–10 ಎಕರೆ ಜಮೀನು ಇದ್ದಂಥ ಕುಟುಂಬದಲ್ಲಿ ಮೂರು ಮಕ್ಕಳು ಇದ್ದರೆ ಎಲ್ಲರೂ ಹಂಚಿಕೊಂಡು ಒಂದು ಎಕರೆ ಎರಡು ಎಕರೆ ತೆಗೆದುಕೊಂಡರೆ ಅವರೆಲ್ಲಾ ಸಣ್ಣ ಹಿಡುವಳಿದಾರರಾಗಿ ಪರಿವರ್ತನೆಯಾಗುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಇವರಿಗೆ ರಕ್ಷಣೆ ಮಾಡುವುದರ ಬಗ್ಗೆ ನಾವು ವಿಶೇಷವಾದ ಗಮನವನ್ನು ಕೊಡದೇ ಇದ್ದರೆ ಬಹುಶಃ ಈಗಾಗಲೇ ಕೃಷಿ ಕುಟುಂಬದಿಂದ ಬಂದಂಥ ಯುವಕ ಅವನು ವಿದ್ಯಾವಂತನಿರಲಿ ಅಥವಾ ಇಲ್ಲದಿರಲಿ ನಗರ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದಾನೆ. ಅವನು ಏನಾದರೂ ಎಸ್.ಎಸ್.ಎಲ್.ಸಿ. ಓದಿದ್ದರೆ ಅವನು ಹೊಲಕ್ಕೆ ಹೋಗುವುದು ಮರೆತುಬಿಟ್ಟಿರುತ್ತಾನೆ. ಹೀಗಾಗಿ ಕೃಷಿಕನ ಸ್ಥಿತಿ ದಿನೆ ದಿನೇ ಹದಗೆಡುತ್ತಿರುವಂಥ ಸಂದರ್ಭದಲ್ಲಿ ನಾವು ಈ ರೈತ ಸಮೂಹವನ್ನು ಉಳಿಸುವುದಕ್ಕೆ ಅವರ ಪ್ರತಿನಿಧಿಗಳಾಗಿ ಬಂದಿರುವಂಥವರು ನಾವು ಮಾಡುತ್ತಿರುವಂಥದ್ದು ಏನು? ತಾವು ಏನೂ ಮಾಡಿಲ್ಲವೆಂದು ನಾನು ಹೇಳುತ್ತಿಲ್ಲ. ಆದರೆ ನಾವು ಇಟ್ಟಿರುವಂಥ ಎರಡು ಹೆಜ್ಜೆಯಲ್ಲಿ ಇವರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಈ ಒಂದು ರೈತ ಸಮುದಾಯವನ್ನು ಉಳಿಸುವುದಕ್ಕೆ ಆಗುವುದಿಲ್ಲ. ಇವತ್ತು ನಾನು ಕೇಳುತ್ತೇನೆ. ನಾವೆಲ್ಲಾ ಅವರ ಪ್ರತಿನಿಧಿಗಳಾಗಿ ಇಲ್ಲಿಗೆ ಇವತ್ತು ಬಂದಿದ್ದೇವೆ. ನಾವೇ ಕೇಂದ್ರ ಸರ್ಕಾರಕ್ಕೆ ಸತತವಾಗಿ ನಾಲ್ಕುವರ್ಷಗಳ ಕಾಲ ಬರಗಾಲ ಎಂದು ವರದಿ ಕೊಟ್ಟಿದ್ದೇವೆ. ಅದರಲ್ಲಿ ಶೇಕಡ 40, 50 ಭಾಗವಾದರೂ ರೈತ ಬೆಳೆದಂಥ ಬೆಳೆ ಸಂಪೂರ್ಣವಾಗಿ ನಾಶ ಆಗಿದ್ದರೆ ಒಂದು ಸಾರಿ ಹೊಡೆತ ತಿನ್ನಬಹುದು, ತಡೆದುಕೊಳ್ಳಬಹುದು, ಸತತವಾಗಿ ಈ ರೀತಿ ನಾಲ್ಕು ಬಾರಿ

ಹೊಡೆತ ಬಿದ್ದಿರಬೇಕಾದರೆ ಅವನಿಗೆ 5 ಸಾವಿರವಾಗಲಿ, 10 ಸಾವಿರವಾಗಲಿ, 20 ಸಾವಿರವಾಗಲಿ, ಅವನಿಗೆ ಮರುಪಾವತಿ ಮಾಡುವ ಶಕ್ತಿ ಎಲ್ಲಿದೆ? ನಾವು ಎಲ್ಲದಕ್ಕೂ ನೆರವು ಕೊಡುತ್ತೇವೆ, ಕೈಗಾರಿಕೆಗಳಿಗೆ ಅವನು ಪಡೆದಿರುವ ಸಾಲವನ್ನು ಸಂಪೂರ್ಣವಾಗಿ ಮನ್ನಾ ಮಾಡುತ್ತೇವೆ, ಅಂದರೆ ಎಲ್ಲಾದರೂ ಒಂದು ಕಡೆ ಇದರ ಬಗ್ಗೆ ಸಮಗ್ರವಾಗಿ ಚಿಂತನೆ ಮಾಡಿ, ನೀವೇ ಸರ್ಕಾರದವರು ಯೋಚನೆ ಮಾಡಿ ನಿಮ್ಮ ಹಣಕಾಸಿನ ಸಚಿವರ ಮೂಲಕ ಫೈನಾನ್ಸ್ ಕಮಿಷನ್ಸ್‌ನ ಅಧಿಕಾರಿಗಳು ಬಂದಾಗ ರೈತನ ಸಾಲ ಒಂದು ಬಾರಿಯಾದರೂ ಸಂಪೂರ್ಣವಾಗಿ ಮನ್ನಾ ಮಾಡಿ ಕೃಷಿಕ ಅವನ ಕಾಲ ಮೇಲೆ ನಿಲ್ಲುವಂಥ ವ್ಯವಸ್ಥೆಯಾಗಬೇಕು ಎಂದೇನು ತಮ್ಮ ತಮ್ಮ ಕಳಕಳಿ ಏನು ವ್ಯಕ್ತಪಡಿಸಿದ್ದೀರಾ ಅದನ್ನು ಕಾರ್ಯರೂಪಕ್ಕೆ ತರುವ ಕಡೆ ವಿಶೇಷವಾದ ಗಮನ ಕೊಡದೇ ಇದ್ದರೆ ಬಹುಶಃ ಈ ರೈತ ಸಮೂಹವನ್ನು ಉಳಿಸುವಂಥದ್ದು ತುಂಬಾ ಕಷ್ಟವಾಗುತ್ತದೆಂದು ಈ ಸಂದರ್ಭದಲ್ಲಿ ನಾನು ಸರ್ಕಾರದ ಗಮನಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಿದ್ದೇನೆ. ಬಹಳ ಕಡೆ ರೈತನೇ ಇನ್ನೊಂದು ಜಮೀನಿಗೆ ಕೂಲಿ ಹೋಗುತ್ತಿದ್ದಾನೆ. ಸಣ್ಣ ಅತಿ ಸಣ್ಣ ರೈತರು ಇವರೆಲ್ಲರೂ ಕೂಲಿಕಾರರಾಗಿ ಪರಿವರ್ತನೆಯಾಗುವಂಥ ಒಂದು ಪರಿಸ್ಥಿತಿ ಇವತ್ತು ಎಲ್ಲಾ ಕಡೆ ಕಾಣುತ್ತಿದೆ. ಮಾನ್ಯ ಕೃಷಿ ಸಚಿವರು ಎಷ್ಟೊಂದು ಕಳಕಳಿಯಿಂದ ಮಾತನಾಡುತ್ತಾರೆ. ನಿಮ್ಮ ಬಗ್ಗೆ ನಮಗೆ ಗೌರವ ಇದೆ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳುವ ಭಾಷೆಯಲ್ಲಿ ಹೇಳುವುದಾದರೆ ನಮ್ಮ ಬಗ್ಗೆ ನಮಗೆ ಗೌರವ ಇದೆ. ಆದರೆ ನಾನು ನಮ್ಮನ್ನು ಕೇಳುತ್ತೇನೆ. ನಿಮ್ಮದೇನು ಸ್ವಾಮಿ ಕೆಲಸ? ಕೃಷಿಕನಿಗೆ ಬಿತ್ತನೆ ಸಂದರ್ಭದಲ್ಲಿ 50 ಪರ್ಸೆಂಟ್ ಸಬ್ಸಿಡಿಯಲ್ಲಿ ಅವನಿಗೆ ಅಗತ್ಯವಿರುವ ಬಿತ್ತನೆ ಬೀಜ ಉತ್ತಮವಾದ ಬಿತ್ತನೆ ಬೀಜ ಅವನಿಗೆ ಕೊಡುವಂಥ ವ್ಯವಸ್ಥೆ ಮಾಡುವುದರಲ್ಲಿ ತಾವು ಸಂಪೂರ್ಣವಾಗಿ ವಿಫಲರಾದಿರಿ ತಾನೆ? ಇವತ್ತು ತಾವು 25 ಪರ್ಸೆಂಟ್ ಬಿತ್ತನೆ ಬೀಜಕ್ಕೆ ಸಬ್ಸಿಡಿ ಕೊಟ್ಟೆವು ಈಗ 50 ಪರ್ಸೆಂಟ್‌ಗೆ ಸಬ್ಸಿಡಿ ಏರಿಕೆ ಮಾಡಿದ್ದೇವೆಂದು, ಹೇಳುತ್ತಿದ್ದೀರಿ, ಪ್ರಾರಂಭದಲ್ಲಿ ಕಳೆದ ನಾಲ್ಕಾರು ವರ್ಷಗಳಲ್ಲಿ ನಮ್ಮ ರೈತರಿಗೆ ಬಿತ್ತನೆ ಬೀಜದಲ್ಲಿ 50 ಪರ್ಸೆಂಟ್ ಸಬ್ಸಿಡಿ ಕೊಡುತ್ತಿದ್ದದ್ದನ್ನು ಒಂದೇ ಸಾರಿ ತಿರ್ಮಾನ ತೆಗೆದುಕೊಳ್ಳುವುದಕ್ಕೆ ನಿಮಗೇನು ಕಷ್ಟವಾಗಿತ್ತು? ಈಗ ಅವನೊಂದು 25 ರಿಂದ 30 ಪರ್ಸೆಂಟ್ ಖರೀದಿ ಮಾಡಿದ್ದಾನೆ. ಅವನಿಗೆ ಆಗಸ್ಟ್ ಒಂದರಿಂದ ಒಂದ್ನಿಮಿಷ ಸಾರ್, ತಾವು ಹೇಳಿರುವ ಪ್ರೆಸ್ ಕಟಿಂಗ್ಸ್ ನನ್ನ ಹತ್ತಿರ ಇದೆ. ಆಗಸ್ಟ್ ಒಂದರಿಂದ ಯಾರು 25 ಪರ್ಸೆಂಟ್ ಸಬ್ಸಿಡಿ ಪಡೆದಿದ್ದಾನೆ. ಅವನಿಗೆ 50 ಪರ್ಸೆಂಟ್ ವಿಸ್ತರಣೆ ಮಾಡಿದ್ದೇವೆ. ಅವನಿಗೆ ವಾಪಸ್ ದುಡ್ಡು ಕೊಡುತ್ತೇವೆಂದು ಘೋಷಣೆ ಮಾಡಿದ್ದೇವೆ. ಏಕೆ ಸ್ವಾಮಿ ಆಗಸ್ಟ್ ಒಂದು? ನಾನು ತಮ್ಮಲ್ಲಿ ಕೇಳುವುದು ಏನೆಂದರೆ ಒಂದು ತಾವು ಅಕ್ಷಮ್ಯ ಅಪರಾಧ ಮಾಡಿರುವುದು ಬಿತ್ತನೆ ಸಂದರ್ಭದಲ್ಲಿ ಉತ್ತಮವಾದ ಬೀಜವನ್ನು 50 ಪರ್ಸೆಂಟ್‌ಗೆ

ಸಬ್ಸಿಡಿಗೆ ಸಿಗುವಂಥ ವ್ಯವಸ್ಥೆ ಮಾಡಬೇಕಾಗಿತ್ತು. ಅದೇನೋ ದೊಡ್ಡ ಉಪಕಾರವಲ್ಲ. ಆದ್ದರಿಂದ ಏನು ಉಪಯೋಗವಿಲ್ಲ. ಆ ಸರ್ಟಿಫೈಡ್ ಸೀಡ್ಸ್‌ಗಳನ್ನು ಖರೀದಿ ಮಾಡುವಂಥ ಸಂದರ್ಭದಲ್ಲಿ ಗೋಲ್‌ಮಾಲ್ ಆಗಿ, ಅವ್ಯವಸ್ಥೆಯಾಗಿ ಮೋಸ ಆಗುತ್ತಿರುವಂಥ ಈ ಸಂದರ್ಭದಲ್ಲಿ ಒಂದು ಸರ್ಕಾರ ಎಂದು ಬದುಕಿದ್ದು ನೀವು ಸಮಯಕ್ಕೆ ಸರಿಯಾಗಿ ಆ ಬಿತ್ತನೆ ಬೀಜಕ್ಕೆ 50 ಪರ್ಸೆಂಟ್ ಸಬ್ಸಿಡಿ ಕೊಡಲಿಕ್ಕೆ ಆಗಲಿಲ್ಲ ಎನ್ನುವುದಾದರೆ ಹೇಗೆ?

ಶ್ರೀ ಕೆ. ಶ್ರೀನಿವಾಸಗೌಡ (ಕೃಷಿ ಸಚಿವರು) :– ಮಾನ್ಯ ಅಧ್ಯಕ್ಷರೆ, ಹೋದ ಸಾರಿ ಆಯವ್ಯಯದಲ್ಲಿ ನಮ್ಮ ಉಪಮುಖ್ಯಮಂತ್ರಿಗಳು ಬಿತ್ತನೆ ಬೀಜಕ್ಕೆ 25 ಪರ್ಸೆಂಟ್ ಸಬ್ಸಿಡಿ ಎಂದು ಡಿಕ್ಲೇರ್ ಮಾಡಿದ್ದರು.

ಶ್ರೀ ಜೆ.ಸಿ. ಮಾಧುಸ್ವಾಮಿ :– ಮಾನ್ಯ ಅಧ್ಯಕರೆ, I am on a point of order ಈಲ್ಡ್ ಆಗಬಹುದು; ನಿಲುವಳಿ ಸೂಚನೆಯಲ್ಲಿ ಇವರು ಮಧ್ಯೆ ಪ್ರವೇಶಿಸಬಾರದು.

ಶ್ರೀ ಕೆ. ಶ್ರೀನಿವಾಸಗೌಡ :– ಅವರೇ ಈಲ್ಡ್ ಆದ ಮೇಲೆ ನೀವು ಏಕೆ ಸ್ವಾಮಿ? ವಿರೋಧ ಪಕ್ಷದ ನಾಯಕರೇ ಈಲ್ಡ್ ಆಗಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಅವರು ಈಲ್ಡ್ ಆಗಬಹುದು, ಕಾನೂನು ಬೇರೆ ಸಾರ್, ಒಬ್ಬ ಮಂತ್ರಿಗಳು ಕೇಳಿದ ತಕ್ಷಣ ಈಲ್ಡ್ ಆದರೆ ತಪ್ಪು ಎಂದು ಹೆಳುವುದಕ್ಕಾಗುತ್ತದೆಯೇ?

ಶ್ರೀ ಕೆ. ಶ್ರೀನಿವಾಸಗೌಡ :– ಮಾನ್ಯ ವಿರೋಧ ಪಕ್ಷದ ನಾಯಕರೇ ಈಲ್ಡ್ ಆಗಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ :– ಸ್ವಾಮಿ This is adjournment motion that we are discussing. He cannot interfere now.

(x) ಶ್ರೀ ಕೆ. ಶ್ರೀನಿವಾಸಗೌಡ :– ಹೌದು ಮಧ್ಯದಲ್ಲಿ ನಾವು ಮಾತನಾಡಬೇಕಾಗುತ್ತದೆ.

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರೇ, ತಾವು ಈಗೇನು ದೀರ್ಘವಾಗಿ ಪ್ರಿಲಿಮಿನರಿ ಸಬ್‌ಮಿಷನ್ ಮಾಡಿದಿರಿ ಅದನ್ನು ಆಲಿಸಿದ್ದೇನೆ. ದಯಮಾಡಿ ನನ್ನ ಮಾತನ್ನು ತಾವು ಕೇಳಿ ತಾವು ಮತ್ತು ತಮ್ಮ ಸ್ನೇಹಿತರು ಹಾಗೂ ವಿವಿಧ ಪಕ್ಷಗಳ ಮುಖಂಡರು ಸೇರಿ ಏನು ನಿಲುವಳಿ ಸೂಚನೆ ಕೊಟ್ಟಿದ್ದಿರಿ ಅದನ್ನು ನಾನು 69 ಕ್ಕೆ ಕನವರ್ಟ್ ಮಾಡಿದ್ದೇನೆ.

(ಗೊಂದಲ)

ಈ ನಡವಳಿಕೆಯು ಮಾನ್ಯ ಸಚಿವರಿಂದ ಪರಿಷ್ಕರಿಸಲ್ಪಟ್ಟಿದೆ